ಪಂಚಮ

ಸಂಪುಟ : 6 ಬೆಲೆ : 50 ಪೈಸೆ
ಸಂಚಿಕೆ : 2 ಫೆಬ್ರವರಿ 1982

ಖಾಕಿ ರೂಪದಲ್ಲಿ ಬಂದ ಸಾವು

ಚಿಕ್ಕಮಗಳೂರಿನಲ್ಲಿ ಸಾವು ಖಾಕಿ ರೂಪ ಧರಿಸಿ ಬಂದು ಬಡವನೊಬ್ಬನ ಬಲಿ ತೆಗೆದುಕೊಂಡಿದೆ. ಸರ್ವೆ ಇಲಾಖೆಯ ನಾಲ್ಕನೇ ದರ್ಜೆ ನೌಕರ, ಇಲ್ಲಿನ ಶಂಕರಪುರದ ನಿವಾಸಿ ಬಿ.ಎಂ.ಶಂಭಯ್ಯನ ಮೇಲೆ ಮನೆಗೆ ಸಂಬಂಧಿಸಿದ ವ್ಯಾಜ್ಯ ಸಂಬಂಧಿಸಿದ ಹಾಗೆ ಪಕ್ಕದ ಮನೆಯವರು ನೀಡಿದ ದೂರಿನ ಮೇಲೆ ಖಾಕಿ ದಿರುಸಿನ ಎಸ್. ಐ ಬಾಷಾ-ಸಾಬ್ ಮತ್ತು ಪೇದೆ ಚಲ್ಲಪ್ಪ ರಸ್ತೆಯಲ್ಲೇ ಒಮ್ಮೆ ಹೊಡೆದು, ಠಾಣೆಗೆ ಎಳೆದೊಯ್ದು ಹಿಂಸೆ ಕೊಟ್ಟದ್ದರಿಂದ ಅವಮಾನ ಸಹಿಸದ ಶಂಭಯ್ಯ ಪೋಲೀಸರು ನೀಡಿದ ಆತಿಥ್ಯದ ಬಗ್ಗೆ ಅಂತಿಮ ಪತ್ರ ಬರೆದಿಟ್ಟು ಜ. 27ರಂದು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಶಂಭಯ್ಯನ ನೌಕರಿಯನ್ನೇ ನಂಬಿ ಬದುಕುತ್ತಿದ್ದ ಐವರು ಮಕ್ಕಳು ಮತ್ತು ಪತ್ನಿ ಈಗ ಕೇಳುವವರು ಗತಿಯಿಲ್ಲದೆ ಬೀದಿಪಾಲಾಗಬಹುದಾದ ಸ್ಥಿತಿ ಇದೆ. ತುಂಬಿದ ಸಂಸಾರವನ್ನು ಅನಾಥರನ್ನಾಗಿ ಮಾಡಿದ ಈ ಖಾಕಿ ಕೊಲೆಗಡುಕರು 'ಪ್ರಾಮಾಣಿಕತೆ' ಅನ್ನೋದನ್ನ ರೂಢಿಸಿಕೊಳ್ಳಬೇಕಾಗಿದೆ.

ಈ ಅತಿರೇಕದ ವಿರುದ್ಧ ಪ್ರತಿಭಟಿಸಿ ದ.ಸಂ.ಸ ಪೌರಕಾರ್ಮಿಕರು, ನಾಲ್ಕನೇ ದರ್ಜೆ ನೌಕರರು ಸಿ.ಪಿ.ಐ, ಜನತಾಪಕ್ಷ, ಜಾ.ಪು.ಸಮಿತಿ ನೇತೃತ್ವದಲ್ಲಿ ಶಂಭಯ್ಯನ ಶವದ ಮೆರವಣಿಗೆ ನಡೆಸಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುವಂತೆ ಮೃತರ ಪತ್ನಿ ಗೌರಮ್ಮ ಎಸ್.ಪಿ ಗೆ ಮನವಿ ಪತ್ರ ಸಲ್ಲಿಸಿದ್ದಾರೆ.

[ಕೊನೇ ಪುಟ ನೋಡಿ]

ಏ ಜಂಗ್ ಹೈ ಆಝಾದಿ ಕಿ

ಉರ್ದು ಸಾಹಿತ್ಯದಲ್ಲಿ ಕ್ರಾಂತಿಯ ಅಲೆಗಳನ್ನು ಎಬ್ಬಿಸಿದ ಜನಕವಿ ದಿ ಕಾಮ್ರೇಡ್ ಮಗದುಮ್ ಮೊಹಿಯುದ್ದೀನ್ ಪ್ರಾಧ್ಯಾಪಕ ವೃತ್ತಿಯನ್ನು ಬಿಟ್ಟು ಶಹಾಬಾದದ ಸಿಮೆಂಟ್ ಕಾರ್ಖಾನೆಯ ಕೂಲಿಕಾರರನ್ನು ಒಗ್ಗೂಡಿಸಿ "ಏ ಜಂಗ ಹೈ ಆಝಾಧಿಕಿ" ಎಂದು ಹಾಡಿ ಹೋರಾಟಕ್ಕೆಳೆದವರು. ಹೀಗಾಗಿ ಶಹಾಬಾದದ ಕೂಲಿಕಾರರ ಹೋರಾಟ ಸಾಂಸ್ಕೃತಿಕವಾಗಿಯೂ ಮಹತ್ವಪೂರ್ಣವಾಗಿದೆ. ದಶಕಗಳುದ್ದಕ್ಕೂ ಪ್ರಭಾವಪೂರ್ಣವಾದ ಹೋರಾಟದ ಇತಿಹಾಸ ಹೊಂದಿದ ಶಹಾಬಾದದಲ್ಲಿ ಇಂದು ಅಲ್ಲಿಯ ಕೂಲಿಕಾರರ ನಾಯಕ ಹರಿಜನ ಕೋಮಿಗೆ ಸೇರಿದ ಡಾ॥ ಗುರುನಾಥ ಅವರು ಗುಂಡಿಗೆ ಬಲಿಯಾಗಿ ಗುಲ್ಬರ್ಗಾ ಆಸ್ಪತ್ರೆಯಲ್ಲಿ ಚಿಂತಾಜನಕ ಸ್ಥಿತಿಯಲ್ಲಿದ್ದಾರೆ.

[ಕೊನೆಯ ಪುಟಕ್ಕೆ]



ಇಸ್ಲಾಂ ತತ್ವಜ್ಞಾನ ಮತ್ತು ವರ್ಗರಹಿತ ಸಮಾಜದ ಆದರ್ಶಗಳಿಂದ ಕೂಡಿದ ಜನಪ್ರಿಯ ಮೊಜಾಹೆದಿನ್ ಪಕ್ಷದ ಕಾರ್ಯಕರ್ತರನ್ನು ಇರಾನದ ಮತಾಂಧ ಖೋಮೆನಿ ಸರ್ಕಾರ ಕಂಡಲ್ಲಿ ಗಲ್ಲಿಗೇರಿಸುವ ರೀತಿ ಇದು. ಓವರ್ ಬ್ರಿಜ್ ಕೆಳಗಡೆ ಸಾರ್ವಜನಿಕವಾಗಿ ಗಲ್ಲಿಗೇರಿಸಿದ್ದನ್ನು ಈ ಚಿತ್ರದಲ್ಲಿ ಕಾಣಬಹುದು.

"ಅಲ್ಲಾನ ಹೆಸರಿನಲ್ಲಿ ಗಗನ ಚುಂಬಿಯಾದ ವೈಭವ ಪೂರ್ಣ ಮಸ್ಜೀದೆಗಳು ಹುಟ್ಟಿಕೊಂಡಿವೆ. ಕುರಾನದೊಳಗಿನ ಪವಿತ್ರ ಯುದ್ಧಕ್ಕೆ ಸಂಬಂಧಿಸಿದ ಸ್ತೋತ್ರಗಳ ಕೆತ್ತನೆಯಿಂದ ತುಂಬಿದ ಖಡ್ಗಗಳು ನಮ್ಮ ಕಡೆಗೆ ತಿರುಗಿವೆ. ಅತನ ಅನುಯಾಯಿಗಳು ಮನೆಯನ್ನು ಹೊಕ್ಕು ನಮ್ಮ ಯುವಕರನ್ನು ತಮ್ಮ ಗುಂಪಿನ ನಾಯಕರ ಗುಲಾಮರನ್ನಾಗಿ ಮಾಡಿದ್ದಾರೆ. ನಮ್ಮ ತಾಯಂದಿರನ್ನು ದೂರದ ಮಾರುಕಟ್ಟೆಗಳಲ್ಲಿ ಮಾರಿದ್ದಾರೆ. ದೇವರ ಮಾರ್ಗದಲ್ಲಿ, ಧರ್ಮಯುದ್ಧದ ಹೆಸರಿನಲಿ ನಮ್ಮ ಜನತೆಯನ್ನು ಕೊಂದಿದ್ದಾರೆ ದಾನ ಧರ್ಮದ ಹೆಸರಿನಲ್ಲಿ ನಮ್ಮದೆಲ್ಲವನ್ನೂ ಲೂಟಿ ಮಾಡಿದ್ದಾರೆ".

—ಡಾ॥ ಅಲಿ ಶರಿಯತಿ

[ಇರಾನದ ಸಮಾಜ ಶಸ್ತ್ರಜ್ಞರಾಗಿದ್ದ ಅಲಿ ಮುಸ್ಲಿಂ ಧರ್ಮವನ್ನು ಕಾಲದ ಪ್ರವಾಹದೊಂದಿಗೆ ಅರ್ಥೈಸಿದವರು. ೧೯ ಜೂನ್ ೭೭ರಲ್ಲಿ ಶಹಾನ ಸವಾಕ್ ಅವರ ಕೊಲೆಮಾಡಿತು. ಇಂದು ಅವರ ತಂದೆ, ಹೆಂಡತಿ, ಮಕ್ಕಳು ಖೊಮೇನಿಯ ಸವಾಮಾದ ಹಿಂಸೆಯಿಂದಾಗಿ ಜೀವ ಕೈಯಲ್ಲಿ ಹಿಡಿದು ಬದುಕುತ್ತಿದ್ದಾರೆ]

ಮಾನವೀಯ ಚಾರ್ವಾಕರ ಹತ್ಯೆ!

"ಈ ಚಾರ್ವಾಕ ಮತವನ್ನು ಎಲ್ಲರೂ ಖಂಡಿಸಿರುವರು. ಇದರಲ್ಲಿರುವ ಗುಣಾಂಶವನ್ನು ಗಮನಿಸಬೇಕು. ಅದೆಂತೆಂದರೆ-ಈ ದರ್ಶನವು ಪರಮ ಶಾಂತಿಗೆ ಕಾರಣವಾಗಿರುವುದು. ಈ ಮತದವರು ನಶ್ವರವಾದ ದೇಹಕ್ಕಿಂತಲೂ ಬೇರೆಯಾದ ಶಾಶ್ವತವಾದ ಆತ್ಮನನ್ನು ಒಪ್ಪುವುದಿಲ್ಲ. ಎಂದರೆ, ಎಲ್ಲಾ ಅನರ್ಥಕ್ಕೂ ಕಾರಣವಾದ ಅಹಂಕಾರವೆಂಬ ಅಭಿಮಾನವನ್ನೇ ನಿರ್ಮೂಲ ಮಾಡಿದ ಹಾಗಾಯಿತು. ಶಾಶ್ವತವಾದ ಅಹಂಕಾರವಿದ್ದಲ್ಲಿ ವೈರಾಗ್ಯ, ಶಾಂತಿ ಎಂಬುದು ಹೇಗೆ?

...ಈ ಚಾರ್ವಾಕ ವಿಷಯದಲ್ಲಿ 'ಮಹಾಭಾರತ'ದಲ್ಲಿ ಒಂದು ಕಥೆ ಇರುವುದು. ಮಹಾಭಾರತ ಯುದ್ಧವಾದ ಮೇಲೆ ಧರ್ಮರಾಜನು ಪಟ್ಟಾಭಿಷಕ್ತನಾಗಿ ಒಂದು ದಿನ ಸಭೆಯಲ್ಲಿರುವಾಗ ದುರ್ಯೋಧನನ ಮಿತ್ರನಾದ ಚಾರ್ವಾಕನೆಂಬ ರಾಕ್ಷಸನು ಬಂದು—ಅಯ್ಯಾ, ಮಹಾರಾಜನೇ, ನೀನು ಮಹಾ ಪಾಪಿಷ್ಠನು; ನಿನ್ನ ಮುಖವನ್ನು ನೋಡಬಾರದು; ಕೇವಲ ರಾಗಾಂಧವಾಗಿ ಪ್ರಪಂಚವನ್ನೆಲ್ಲಾ ಸ್ತ್ರೀಬಾಲಶೇಷವಾಗಿ ಹಾಳು ಮಾಡಿದೆಯಲ್ಲಾ; ಇಷ್ಟು ಜನರನ್ನೂ ಕೊಂದು ರಕ್ತಮಯವಾದ ರಾಜ್ಯಭೋಗವನ್ನು ಅನುಭವಿಸುವುದಕ್ಕಿಂತಲೂ ನರಕಾನುಭವವು ಉತ್ತಮವಲ್ಲವೆ? ಯುದ್ಧದಲ್ಲಿ ಸತ್ತವರಿಗೆ ಸ್ವರ್ಗಬರುವುದೆಂದು ಪ್ರೋತ್ಸಾಹ ಮಾಡಿ ಪ್ರಪಂಚವನ್ನೇ ವಿನಾಶ ಮಾಡಿದೆ, ಎಂದು ಬಹುವಿಧವಾಗಿ ದೂಷಣೆ ಮಾಡಿದನು. ಅನಂತರ ಅಲ್ಲಿದ್ದ ಬ್ರಾಹ್ಮಣರು ಶಾಪದಿಂದ ಈ ರಾಕ್ಷಸನನ್ನು ಕೊಂದು ಬಿಟ್ಟರು".

ಈ ಭಾಗವನ್ನು ಮಹಾಮಹೋಪಾಧ್ಯಾಯ ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ ಅವರು ಬರೆದ 'ಹಿಂದೂ ದರ್ಶನಸಾರ' ಎಂಬ ಗ್ರಂಥದಿಂದ ತೆಗೆದುಕೊಂಡಿದೆ. ಚಾರ್ವಾಕ ದರ್ಶನವು ಸರ್ವದರ್ಶನ ಪ್ರತಿಕಕ್ಷಿಯಾಗಿ, ದರ್ಶನಗಳಿಗೆಲ್ಲ ಮೊದಲನೆಯದಾಗಿ ನಿಂತು ಪೂರ್ವಕಾಲದಲ್ಲಿ ಪ್ರಸಿದ್ಧವಾಗಿತ್ತು. ಅಂತೆಯೇ ಅದಕ್ಕೆ ಲೋಕಾಯತ ಮತವೆಂದೂ ಕರೆಯುವರು. ಈ ನಿರೀಶ್ವರವಾದವು ಬದುಕಿನ ಬಗ್ಗೆ ಗಾಢವಾದ ಆಸಕ್ತಿಯನ್ನು ಹೊಂದಿದೆ 'ಅಗ್ನಿಹೋತ್ರ ದೇವಾಲಯಾದಿ ಶಾಸ್ತ್ರಗಳು ಬುದ್ಧಿ ಪೌರುಷವಿಲ್ಲದವರ ಜೀವಿಕೆಗಳಾಗಿರುವುವು' ಎಂದು ಹೇಳುವ ಈ ದರ್ಶನ ಮನುಷ್ಯನ ಬಗ್ಗೆ ಕಾಳಜಿವಹಿಸುತ್ತದೆ. ಆಳುವ ವರ್ಗದ ಸೇವೆಯಲ್ಲಿ ನಿರತವಾದ ವೈದಿಕಮತ ಈ ದರ್ಶನವನ್ನು ಯುಗ ಯುಗಗಳಿಂದಲೂ ಖಂಡಿಸುತ್ತ ಬಂದಿದೆ. ಮೇಲಿನ 'ಮಹಾ ಭಾರತ'ದ ಉದಾಹರಣೆಯಲ್ಲಿ ಧರ್ಮರಾಜನ ಅಮಾನುಷತನ ಆಳುವ ವರ್ಗದ ಸಂಕೇತವಾದರೆಚಾರ್ವಾಕ ದರ್ಶನದಮಾನವೀಯ ವಿಚಾರಗಳಿಗೆ ರಾಕ್ಷಸ ಪ್ರತಿಮೆ ಕೊಡುವುದು ಮಾನವತಾವಾದಿಗಳೆಂದು ಹೇಳಿಕೊಂಡು ಮೆರೆವ ಬ್ರಾಹ್ಮಣರು ಕೊಲೆ ಮಾಡುವುದು ವೈದಿಕ ಧರ್ಮದ ಸಂಕೇತವಾಗಿದೆ.ಅವರು ಕೊಲೆ ಮಾಡುವ ರೀತಿ ಕೂಡ ನಯವಾಗಿದೆ. ಅವರು ಕೊಡಲಿ ಬಡಿಗೆಗಳಿಂದ ಕೊಲೆ ಮಾಡುವುದಿಲ್ಲ. ಆದರೆ ಶಾಪದಿಂದ ಅಂದರೆ ಅನೇಕ ತಂತ್ರಗಳಿಂದ ಕೊಲೆ ಮಾಡುವರು, ಅವರು ಕೊಲೆಗಡುಕರು ಎಂದು ತಿಳಿದುಕೊಳ್ಳಲು ಯುಗಗಳೇ ಬೇಕಾಗುವುದು. ಅಲ್ಲದೆ ಆಳುವವರ್ಗ ಅವರನ್ನು ಸದಾ ಪೋಷಿಸಿಕೊಂಡು ಬರುತ್ತದೆ. ಏಕೆಂದರೆ ಅವರು ಜನತೆಯನ್ನು ಮೋಸಗೊಳಿಸಲು ಅನೇಕತಂತ್ರಗಳನ್ನು ಉತ್ಪಾದಿಸುವ ಕಾರ್ಖಾನೆಗಳಾಗಿರುತ್ತಾರೆ. ಇಲ್ಲಿಬ್ರಾಹ್ಮಣರೆಂದರೆ ಇಂಥ ನೀಚತನವನ್ನು ಒಪ್ಪಿದವರು ಎಂಬ ಅರ್ಥ.

ಇಂಥ ಎಲ್ಲಾ ಕ್ರೌರ್ಯಕ್ಕೆ ವಿರೋಧಿಯಾಗಿ ಜನಪ್ರಿಯವಾಗಿದ್ದು ಕೊನೆಗೂ ಬ್ರಾಹ್ಮಣರ ಕುತಂತ್ರದಿಂದ ನಿರ್ನಾಮವಾದ ಚಾರ್ವಾಕ ದರ್ಶನವನ್ನು ಮತ್ತೆ ಜನಪ್ರಿಯಗೊಳಿಸ ಬೇಕಿದೆ. ಅಂಥ ದಾರ್ಶನಿಕರು ಭಾರತದಲ್ಲಿ ಹುಟ್ಟಿದ್ದು ಒಂದು ಹೆಮ್ಮೆಯ ಸಂಗತಿ.

ಕುಮಾರಿ ವೇದವತಿ

ಗಾಳಿಪುರ ಕಾವಲು ಭೂ ಸಮಸ್ಯೆ : ದಲಿತರ ಪರ ಇತ್ಯರ್ಥ

ಹೊಳೆನರಸೀಪುರ ತಾಲ್ಲೂಕಿನ ಗಾಳಿಪುರ ಕಾವಲಿನ ೧೦ಎಕರೆ ೯ಕುಂಟೆ ಜಮೀನಿಗೆ ಸಂಬಂಧಿಸಿದ ಹಾಗೆ ನಡೆದಿದ್ದ ಮೋಸವನ್ನು ಪ್ರತಿಭಟಿಸಿ ತಾ॥ ೧೧.೮೧ರಿಂದ ಧರಣಿ ಸರದಿ ಸತ್ಯಾಗ್ರಹ ನಡೆಸಿ ೭೫ನೇ ದಿನ ತಲುಪಿದ್ದ ದ.ಸಂ.ಸ. ಹೋರಾಟದಲ್ಲಿ ಜಯಗಳಿಸಿ ಸತ್ಯಾಗ್ರಹವನ್ನು ವಾಪಸ್ಸು ತೆಗೆದುಕೊಂಡಿದೆ. ಬಡವರ ಈ ಭೂ ಹೋರಾಟಕ್ಕೆ ಬೆಂಬಲಿಸಿದ ಎಲ್ಲಾ ಬಂಧುಗಳಿಗೂ, ಹಾಸನ ಜಿಲ್ಲಾ ರೈತ ಸಂಘಕ್ಕೂ ಪತ್ರಕರ್ತರಿಗೂ ದ.ಸಂ.ಸ ಕೃತಜ್ಞತೆ ಸಲ್ಲಿಸಿದೆ.

ಮುಬ್ಬಿನಲ್ಲಿ ಕತ್ತು ಕೊಯ್ಯುವ ಕೆಲಸಗಳು

ಮಹಾತ್ಮಗಾಂಧಿ ಹಾಸ್ಟೆಲ್‌ನಲ್ಲಿ ಒಂದು ಮೀಟಿಂಗ್‌ಗೆ ಹೋಗಿದ್ದೆ. ಉತ್ತರ ಪ್ರದೇಶದ ೇವೋಲಿ, ಸಾಧುಪುರದ ಹರಿಜನರ ರಕ್ತಮಾಂಸ ೆಲ್ಲಾಡಿದ ಬಗ್ಗೆ ಅಲ್ಲಿ ಚರ್ಚೆ ನಡೆಯಿತು. ನಾವು ಕೊಲೆಗಡುಕರು' ಎಂಬ ನಿರ್ಣಯವನ್ನು ೀ ಸಭೆಯು ಸರ್ವಾನುಮತದಿಂದ ಅಂಗೀಕರಿಸಿದೆ' ಂದು ಬರೆದು ಸಹಿಹಾಕುವಂತೆ ಕೇಳಿದೆ, ಮೂವ ್ತೈರು ಸಹಿಗಳಿದ್ದವು. ಒಬ್ಬ ಚೀಟಿಯಲ್ಲಿ ಈ ೀತಿ ಬರೆದು ಕಳಿಸಿದನು. ನಾನು ಕೊಲೆಗಡುಕ ಲ್ಲ ಕೊಲೆಗಡುಕನಾದರೆ ಹೇಗೆ?

ಊರಿನ ಅರ್ಧದಷ್ಟು ಜನ ಹೆದರಿ ಹೆಪ್ಪಾಗಿ ಾತ್ರೋರಾತ್ರಿ ಚದುರಿ ಹೋಗಿದ್ದರು. ಬೆಳಿಗ್ಗೆ ೨ಗಂಟೆ ಸಮಯ ಡಿ.ಸಿ.,ಎಸ್.ಪಿ. ಒಂದೊಂದು ೀಪಿನಲ್ಲಿ ಬರ್ರನೆ ಬಂದು ಇಳಿದರು. ಐದಾರು ುವಕರು, ಇಬ್ಬರು ಮುದುಕರು ಬುದುಗುಟ್ಟಿ ೊಂಡು ಬಂದು ಜೀಪು ಮುತ್ತಿದರು. 'ಕೊಲೆ ಡೆದದ್ದು ಯಾವ ಮನೆಯಲ್ಲಿ ಎಂದು ಡಿ.ಸಿ. ೇಳಲು ಎಲ್ಲರು ಕಾಲೋನಿಯ ಕಡೆ ಮುಖಮಾಡಿ ರು. ಅದೇ ದಾರಿಯಲ್ಲಿ ಒಬ್ಬ ಹೆಂಗಸು ಕಂಕು ಲ್ಲಿ ಹಾಲು ಕುಡಿಯುವ ಕೂಸು ಎತ್ತಿಕೊಂಡು ರಗಿಗೆ ಜೋತು ಬಿದ್ದಿದ್ದ ಇನ್ನೊಂದರ ಕೈ ಡಿದು ಬರುತ್ತಿದ್ದಳು. ಹಾಗೆ ಬಂದವಳು ಬ್ಬರು ಮಕ್ಕಳನ್ನೂ ಡಿ.ಸಿ., ಎಸ್.ಪಿ.ಯವರ ಾಲ ಮೇಲಾಕಿ ತಾನು ಕಾಲಿಡಿದು ಗೋಳಾಡ ೂಡಗಿದಳು. 'ಛೇ ಛೇ ಮೇಲೇಳಮ್ಮ' ಎಂದು ೇಲೆತ್ತಿದರು. ಹೆಂಗಸು ಮಕ್ಕಳನ್ನ ಆ ಕಡೆ ರೆದು ದಾರಿ ಮಾಡಿ ಕೊಟ್ಟನು. ಬುಸುಗುಟ್ಟು ್ತಾ ಹಿಂದಿಂದೆ ಬರುತ್ತಿದ್ದ ಹುಡುಗರು ಹೇಳಿ ರು 'ಕೊಲೆ ನಡೆದದ್ದು ನಿಜ ಆದ್ರು ಕೊಲೆ ಅಲ್ಲ ಂದು ಪೋಲೀಸ್ ರಿಪೋರ್ಟ್‌ಮಾಡಿದ್ದಾರೆ ಾರ್. ಅವ್ರ ಕಡೆಯಿಂದ ದುಡ್ಡು ತಿಂದು, ಹೆಡ ಡಿದು ಸತ್ತಿದ್ದಾನೆಂದು ಹೆಂಡತಿ ಕಡೆಯಿಂದ ೇಳಿಕೆ ತೆಗೆದುಕೊಂಡಿದ್ದಾರೆ. ಅದಕ್ಕೆ ನೀವು ರೋವರೆಗೂ ಹೆಣ ಮುಚ್ಚಲ್ಲ ಅಂತ ತಡೆ ಹಿಡಿ ್ಟೀವೆ'. ಈ ಮಾತುಗಳಿಗೆ ಡಿ.ಸಿ., ಎಸ್.ಪಿ. ಶಿಕ್ಯಾತನಂತೆ ಗುಮ್ಮ ಹಾಕಿದರು. 'ನಿಜ ್ವಾಮಿ ಎಂದು ಮುದುಕ ಊಗುಟ್ಟಿದರೆ ಈ ುಕ್ಕಳಿಗೆ ಯಾರು ಗತಿ ಸ್ವಾಮಿ' ಅನ್ನುತ್ತಾ ಣೆ ಹಣೆ ಚಚ್ಚಿಕೊಂಡು ಹೆಂಗಸು ಹಿಂದೆ ದ್ದಳು. ಮನೆಯ ಹತ್ತಿರ ಬಂದ ಅಧಿಕಾರಿಗಳು ನೆಯ ಸೊಂಡಿಲಿನಂತೆ ಕಣ್ಣಾಡಿಸಿದರು. ಸ್.ಪಿ. ಯವರು ಬಾಗಿಲು ತೆಗೆಯುವಂತೆ ರ್ಡರ್ ಮಾಡಿದರು. ಪಿ.ಸಿ. ತಟಿಕೆಯನ್ನು ಹಿಂದಕ್ಕೆ ತೆಗೆದ. ಎಸ್.ಪಿ. ಕೈಯಲ್ಲಿ ದೊಣ್ಣೆ ನಕ್ಕಿತು. ಮಧ್ಯಾಹ್ನದ ಬಿಸಿಲಿಗೆ ಹಟ್ಟಿ ಮೈ ಒಣಗಿಸಿ ಕೊಂಡು ಕೂತಿತ್ತು. ಒಂದು ಸೊಂಟ ದುದ್ದ ಕೆಸರು ಮಣ್ಣಿನ ಗೋಡೆಯ ಮೇಲೆ ವಪ್ಪಾರು ಬಗ್ಗಿಸಿ ೬ ಅಡಿ ಉದ್ದ ೪ಅಡಿ ಅಗಲ ವಿಸ್ತೀರ್ಣದ ಮಳೆ ಬಿಸಿಲಿಗೆ ನಾಲಿಗೆ ಚಾಚಿ ನಿಂತ ಗುಡಿಸಲು ಅದು. ಅದಕ್ಕೆ ಬಳಸಿದ್ದ ಒಟ್ಟು ೯೬ ಬಿದಿಗು ದೊಣ್ಣೆಗಳು ಮೂಳೆಯಂತಿದ್ದವು. ಒಂದು ಗಾಡಿಯಷ್ಟೆ ಹಂಚಿ ಹುಲ್ಲು ಅದರ ಮೈ ಮುಚ್ಚಿ ಕೊಳ್ಳಲು ಸಾಕಾಗಿತ್ತು. ಅದಕ್ಕೆ ೧೨ ವರ್ಷ ವಯಸ್ಸು. ಅದರೊಳಗೆ ಅಡಗಿದ್ದು ಲೆಕ್ಕಕ್ಕೆ ಸಿಕ್ಕಿದ ಒಟ್ಟು ಆಸ್ತಿ ಈ ಕೆಳಕಂಡಂತಿದೆ.

ಒಂದು ಬಿದಿರು ಕಡ್ಡಿಯ ಜಾಲಿ

ಈ ಜಾಲಿಯ ಎರಡು ತುದಿಗೂ ಎರಡು ಒಂಟ್ಟಿ ಗಂಟು ನೇತಾಕಿತ್ತು. ಅವು ಗಂಡ ಹೆಂಡಿರ ತಲೆ ದಿಂಬು. ಆಯಸ್ಸಾನ ತುಂಬುದೋಳಿನ ಒಂದು ಷರ್ಟ್, ಅರ್ಧ ಸೀರೆ, ಒಂದು ಗೋಣಿಚೀಲ, ಮಕ್ಕಳ ಉಚ್ಚೆಗೊಚ್ಚು ವಾಸನೆಯ ನಾಲ್ಕೈದು ಬಣ್ಣದ ಚಿಟ್ಟೆಯ ಚೂರು ಮಲಗಿದ್ದವು. ಒಂದು ರಾಗಿಕಲ್ಲು ಮೂಲೆಯಲ್ಲಿತ್ತು. ಕತ್ತೆತ್ತಿ ನೋಡಿದರೆ ಒಂದು ಚರ್ಮದ ಚೀಲ. ಅದರೊಳಗೆ ಚರ್ಮದ ಕೆಲಸಕ್ಕೆ ಬೇಕಾದ ಸಾಮಾನು, ಅಮೃತಾಂಜನ ಡಬ್ಬಿಯಲ್ಲಿ ಚರ್ಮ ಹದ ಮಾಡಲು ಇದ್ದ ಮೇಣ ಇತ್ತು. ಇನ್ನೊಂದು ಮೂಲೆ ಅಡಿಗೆ ಮನೆಯಂತೆ ರೂಪಿತನಾಗಿದ್ದು ೩೨ಮಡಕೆಗಳಿದ್ದವು. ಒಂದು ಮಡಕೆಯ ತಳದಲ್ಲಿ ಒಂದು ಬೊಗಸೆಯಷ್ಟು ಮುಸುಕಿನ ಜೋಳದ ಆಸೀಟು, ಎರಡು ಗಡಿಗೆ ತುಂಬ ನೀರು ಬಿಟ್ಟರೆ ಉಳಿದವು ಖಾಲಿ. ೪ ಅಲ್ಯೂಮಿನಿಯಂ ಪಾತ್ರೆಗಳು ಅದರಲ್ಲಿ ಎರಡು ತಟ್ಟೆಗಳು. ೨ ಪ್ಲಾಸ್ಟಿಕ್ ಚೊಂಬುಗಳು. ೩ ಎಣ್ಣೆ ಸೀಸೆಗಳು. ಎರಡು ದೊಡ್ಡವು ಒಂದು ಚಿಕ್ಕದು ಯಾವುದರಲ್ಲು ಎಣ್ಣೆ ಇರಲಿಲ್ಲ. ಒಂದು ಆಸೆಕಲ್ಲು, ಒಂದು ಗುಂಡುಕಲ್ಲು. ಒಟ್ಟು ೬ ಕಬ್ಬಿಣದ ಸಾಮಾನುಗಳು ೨ ಮಚ್ಚು ೧ಕಳಗತ್ತಿ ೨ ಕುಡ್ಲು ೧ ಗುದ್ದಲಿ ೨ ಬಿದಿರು ಮಂಕರಿಗಳಲ್ಲಿ ಒಂದು ಮುರಿದುಹೋಗಿತ್ತು. ಎರಡುಫೋಟೋಗಳಿದ್ದವು. ಒಂದರ ಗಾಜು ಹೊಡೆದುಹೋಗಿತ್ತು. ಒಂದು ಇಂದಿರಾಗಾಂಧಿಯ ಫೋಟೋ: ಇನ್ನೊಂದು ಆಂಜನೇಯನ ಫೋಟೋ. ಮನೆಗೆ ಬೆಳಕ್ಕ ನೀಡಲು ಜರಡು ಸೀಮೆಎಣ್ಣೆ ಬುಟ್ಟಿ. ಸೀಮೆಎಣ್ಣೆ ಇಲ್ಲದಾಗ ಹೊರಗೆ ಎಣ್ಣೆ ಬಿಟ್ಟು ಹಚ್ಚಲು ಒಂದು ಮಣ್ಣಿನ ಹಣತೆ. ತಟಿಕೆ ಮೇಲಾಕಿದ್ದ ತಮಟೆಯ ಬಳಿ ತೆಗೆದು ನೋಡಿದೆ. ಅದರ ಮೇಲೆ ಸೀಮೆಸುಣ್ಣದಲ್ಲಿ 'ಡಂಗುರ' ಎಂದು ಬರೆಯಲಾಗಿತ್ತು. ಯಾರು ಬರೆದರೆಂದು ನನಗೆ ಗೊತ್ತಿಲ್ಲ. ಈ ಆಸ್ತಿ ತನ್ನ ಸಂಬಂಧಿಕನನ್ನು ಕಳೆದುಕೊಂಡು ತೆಪ್ಪಗಿತ್ತು. ಈ ಸಂಬಂಧಿಕ ಯಾರದೋ ತೋಟದಲ್ಲಿ ತೆಂಗಿನ ಕಾಯಿ ಕಿತ್ತನೆಂದು ಮಾಲಿಕ ಆ ತೋಟಕ್ಕೆ ಬಲಿ ತೆಗೆದುಕೊಂಡಿದ್ದ.

ದೇವೋಲಿಯಲ್ಲಿ ೨೦ ಸಾಧುಪುರದಲ್ಲಿ ೧೦

[10ನೇ ಪುಟ ನೋಡಿ]

ಕೇಬಿ

ಕತ್ತಲೊರಸಿ ಮಾಕಕಿ

'ಮೂರ್ಖರ ಸತ್ಯಾಗ್ರಹ'

ಜನವರಿ 26ರ ಮಂಗಳವಾರದ ಕನ್ನಡಪ್ರಭ ದಿನಪತ್ರಿಕೆಯ ಒಂಭತ್ತನೆ ಪುಟದ 7ನೆ ಕಾಲಮಿನಲ್ಲಿ 'ಗೋಹತ್ಯೆ ನಿಷೇಧಕ್ಕೆ ಬೆಂಬಲ ; ಭಾವೆ ನಿರಶನ' ಎಂಬ ವಿಚಿತ್ರ ಶೀರ್ಷಿಕೆಯ ಒಂದು ವಿಚಿತ್ರ ಸುದ್ದಿ ಓದಿದೆ. ಈ ಜಾತೀಯ ಹಾಗು ಮತೀಯ ದೇಶದಲ್ಲಿ ಗಾಂಧಿಯಂತೆ ವರ್ಣಾಶ್ರಮ ತತ್ವದ ಗಬ್ಬು ಉಸಿರಾಡುತ್ತಿರುವ ಭಾವೆಯವರು ಗೋವಧೆ ನಿಷೇಧದ ಬಗ್ಗೆ ಜನವರಿ 30 ರಿಂದ ಫೆಬ್ರವರಿ 22ರವರೆಗೆ ನಿರಶನ ಮಾಡಲನುವಾಗುವರಂತೆ. ಅವರ ಅನುಯಾಯಿಗಳಾದ ಮಠಾಧೀಶರು, ಸಾಧುಸಂತರು, ಇವರೆಲ್ಲರೂ ಸೇರಿ ದೇಶಾದ್ಯಂತ 'ಕೃಷ್ಣ ಗೋ ಸೇವೆ' ಸಂಘದ ಆಶ್ರಯದಲ್ಲಿ ಪೊಳ್ಳು ಸತ್ಯಾಗ್ರಹವನ್ನು ಏರ್ಪಡಿಸುವ ದಡ್ಡತನವೊಂದು ಜರುಗಲಿದೆ. ದನ ಕಾಯುವವರಿಗೆ ದನದ ಚಿಂತೆ; ಹೃದಯವಿರುವವರಿಗೆ ದಲಿತರ ಕೊಲೆಯ ಬಗ್ಗೆ ಆಕ್ರೋಶ. ದೇಶಾದ್ಯಂತ ಪಶುಗಳಂತೆ ಹರಿಜನರ ಕಗ್ಗೊಲೆಯಾಗುತ್ತಿರುವಲ್ಲಿ ಎಳ್ಳಷ್ಟೂ ವಿಚಾರ ಮಾಡದ ಈ ಬಡಕಲು ಭಾವೆಯವರ ತಲೆ ಕೆಟ್ಟ ಸತ್ಯಾಗ್ರಹ ವಿಚಿತ್ರವಲ್ಲವೆ? ಇಂಥ ವಿಚಿತ್ರದ ವಿರುದ್ಧ ಧ್ವನಿ ಮೂಡಲು ದಲಿತರು ಆ ಸಮಯದಲ್ಲಿ ದನದ ಬಾಡನ್ನ ತಿಂದೇ ಪ್ರತಿಭಟಿಸುವುದು ಉತ್ತಮ. ದಲಿತರು ಕಡಿಮೆ ಬೆಲೆಗೆ ಸಿಗುವ ಈ ಮಾಂಸವನ್ನು ಬಹಿರಂಗವಾಗಿ ಕೊಂಡು ತಿಂದರೆ ಹಿಂದೂಗಳ ಹಲವು ಸವರ್ಣೀಯರು ಹಿಂದೂ ಮಿಲಿಟರಿ ಹೊಟೆಲುಗಳಲ್ಲಿ ರುಚಿ ನೋಡಿ ಸಾಬೂನು ಹಾಕಿ ಬಾಯಿ ತೊಳೆದು ಮನೆ ಸೇರಿ ಕೃಷ್ಣನ ಪೂಜಿಸುವುದೆನ್ನು ಭಾವೆ ತಪ್ಪಿಸುವರೆ? ಪ್ರಪಂಚದ ಅದ್ಭುತಅಳಲ್ಲಿ ಭಾವೆಯಾವರ ಈ ಪಿಕಲುತನವೂ ಒಂದು ಎನಿನಿದೆ ?

—ಪರಮಶಿವ ನಡುಬೆಟ್ಟ

ಬಾಸುಂಡೆಗಳು ಹೇಳಿದ ಪಾಠ.....

'ನೀನಾಗ್ಲೆ ಇಲ್ಲೀತನಕ ಬಂದ್ಯಾ, ನಿನ್ ಚರ್ಮ ಸುಲ್ದ್ ಬಿಡ್ತೀನಿ, ಬೋಳೀಮಗನೆ' ಎಂದು ಆರ್ಭಟಿಸಿ ಮುಖ-ಮೈ ನೋಡದೆ ಚೆನ್ನಾಗಿ ಬಾರಿಸಿದರು. ಹಸಿಕಡ್ಡಿ ತನ್ನ ಹಸಿವನ್ನು ತೀರಿಸಿಕೊಂಡು ಮೂಲೆಯಲ್ಲಿ ಬಿದ್ದಿತು. ಅವ್ವ ಹಸಿರುಗಟ್ಟಿದ ಬಾಸುಂಡೆಗಳ ಮೇಲೆ ಕೈಯಾಡಿಸುತ್ತಾ, ಕಣ್ಣುಗಳಲ್ಲಿ ನೀರು ತುಂಬಿಕೊಂಡು ನನ್ನ ತಲೆಗೂದಲಲ್ಲಿ ಬೆರಳಾಡಿಸಿದಳು.

ಸುಮಾರು ೬೦ ಮನೆಗಳಿರುವ ನಮ್ಮೂರಲ್ಲಿ ೧೩ ಹರಿಜನರ ಕುಟುಂಬಗಳಿವೆ. ತಿಗಳ ಜಾತಿಯವು ೩, ಒಂದೇ ಒಂದು ಕ್ರೈಸ್ತ ಕುಟುಂಬ. ದಲಿತರೆಲ್ಲ ದಿನ ಬೆಳಗಾದರೆ ಸೌದೆ ಮಾರಿ, ಬಂಡೆ ಒಡೆದು ಹೊಟ್ಟೆ ತುಂಬಿಸಿಕೊಳ್ಳಬೇಕು. ಈ ಹಳ್ಳಿಯು ಒಂದು ಕಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದೆ. ಶುಭ್ರವಾದ ಬಿಳಿ ಪೈಜಾಮ, ತುಂಬುತೋಳಿನ ಷರಟು ಧರಿಸುವ ಒಬ್ಬ ಮೇಷ್ಟ್ರು. ಆಂಜನೇಯನ ಪೂಜಾರಿ ವಂಶದ, ಕಪ್ಪು ಶಿಲೆಯಂತ, ಉದ್ದನೆಯ-ಸಣ್ಣ ದೇಹದ ವ್ಯಕ್ತಿ ಈತ. ಇವರು ಯಾವ ಜಾತಿಯವರೇ ಆಗಿರಲಿ 'ಒಳ್ಳೇ ಮೇಷ್ಟ್ರು' ಎಂದು ನಮ್ಮೂರವರು ಮಾತಾಡಿಕೊಳ್ಳುತ್ತಿದ್ದರು.

ಹರಿಜನರ ಕೇರಿಯಿಂದ ಶಾಲೆಗೆ ಹೋಗುತ್ತಿದ್ದವರಲ್ಲಿ ನಾನೂ ಒಬ್ಬ. ಆಗ ನಾನು ನಾಲ್ಕನೇ ತರಗತಿಯಲ್ಲಿ ಓದುತ್ತಿದ್ದೆ. ನಾನು ಸ್ವಲ್ಪ ಚೆನ್ನಾಗಿ ಓದುತ್ತಿದ್ದೆ ಎಂತಲೋ ಅಥವ ಎಲ್ಲರಿಗಿಂತ ದೊಡ್ಡವನು ಎಂತಲೋ ನನ್ನನ್ನು ಶಾಲೆಯ 'ಹಿರೇಮಣಿ' ಯನ್ನಾಗಿ ಮಾಡಿದ್ದರು. ಶುಕ್ರವಾರ ಬಂದಿತೆಂದರೆ ಸಾಕು ಎಲ್ಲರೂ ಲವಲವಿಕೆಯಿಂದ ಅಂದಿನ ಕೆಲಸ ಕಾರ್ಯಗಳನ್ನು ಬೇಗ ಬೇಗ ಮಾಡಿ ಮುಗಿಸಿ 'ಶಾರದೆ ಪೂಜೆಗೆ' ಅನುವು ಮಾಡಿಕೊಡುತ್ತಿದ್ದೆವು. ಹುಡುಗರು ಹಳ್ಳದ ದಡದಿಂದ ಕಿತ್ತು ತಂದ ಕಣಗಿಲೆ ಹೂಗಳನ್ನು ಹುಡುಗಿಯರು ಮಾಲೆ ಮಾಡುತ್ತಿದ್ದರು. ನನ್ನ ಕ್ಲಾಸಿನವಳೇ ಆದ, ತಿಗಳ ಜಾತಿಗೆ ಸೇರಿದ ಜಯಮ್ಮ ಎಂಬ ಹುಡುಗಿ, ಸ್ವಲ್ಪ ತೆಳ್ಳಗೆ ಬೆಳ್ಳಗೆ ಇದ್ದಂತವಳು. ಅವಳು ತನ್ನ ಗೆಳತಿಯರೊಂದಿಗೆ ಶಾಲೆಯ ನೆಲ ಸಾರಿಸುತ್ತಿದ್ದಳು.

ಆ ಹುಡುಗಿ ನನ್ನನ್ನು ಕೂಗಿ "ಈ ಬೆಂಚುಗಳನ್ನು ಆತ್ತ ಇಡಿ, ನೆಲ ಸಾರಿಸ್ತೀನಿ'' ಎಂದು ಬಾಗಿಲ ಕಡೆ ಕೈ ತೋರಿಸಿದಳು. ನಾನು ನನ್ನ ಗೆಳೆಯ ಬಂದು ಬೆಂಚು ಸಾಗಿಸಿದೆವು. ಮೂಲೆಯಲ್ಲೊಂದು ಬೆಂಚು ಉಳಿದಿತ್ತು. ಅದರ ಮೇಲೆ ಒಂದು ಹಿತ್ತಾಳೆ ಚೆಂಬು ಮೌನವಾಗಿ ಕುಳಿತಿತ್ತು. ಜಯಮ್ಮ ಅದರಲ್ಲಿ ಮೇಷ್ಟ್ರಿಗೆ ನೀರು ತಂದುಕೊಟ್ಟು ಖಾಲಿ ಚೆಂಬನ್ನು ಬೆಂಚಿನ ಮೇಲೆ ಇಟ್ಟು ಕಾರ್ಯನಿರತಳಾಗಿದ್ದಳು. ನಾನು ಚೆಂಬನ್ನು ತೆಗೆದು ನೆಲದ ಮೇಲೆ ಇಟ್ಟೆ. ಇದನ್ನು ನೋಡಿದ ಆ ಹುಡುಗಿ "ಸಾರ್, ಸಾರ್!!" ಎಂದು ಕಿರುಚುತ್ತಾ ಹೊರ ಓಡಿದಳು. ನನಗೆ ಅವಳ ಕಿರುಚಾಟಕ್ಕೆ ಕಾರಣ ಹೊಳೆಯಲಿಲ್ಲ. 'ಹಾವೋ ಚೇಳೋ ಕಂಡಿರಬೇಕು' ಎಂದು ಅಲ್ಲೆಲ್ಲಾ ಕಣ್ಣೋಡಿಸಿದೆ. ಏನೂ ಕಾಣಲಿಲ್ಲ. ಏನೋ ಆಗಿರಬೇಕು ಅವಳಿಗೆ ಎಂದು ಹೊರ

ಎಂ. ಸಿ. ನರಸಿಂಹಮೂರ್ತಿ

ಬಂದೆ. ಅಷ್ಟರಲ್ಲಿ ಮೇಷ್ಟ್ರು ಒಂದು ಹಸಿ ಕಡ್ಡಿ ಸಮೇತ ಆ ಹುಡುಗಿಯ ಜೊತೆ ಬಂದರು. ನನಗೆ ಬಹಳ ಆಶ್ಚರ್ಯವಾಯ್ತು.

ಮೇಷ್ಟ್ರು ನನ್ನ ಹತ್ತಿರ ಬಂದು "ಏಯ್ ಅಲ್ಲಿದ್ದ ಚೆಂಬ್ನ ಯಾಕ್ ಮುಟ್ಟೆ'' ಎಂದರು. 'ಬೆಂಚನ್ನು ಆಚೆ ಇಡೋಕೆ ಸಾರ್'' ಎಂದೆ. ಈ ಉತ್ತರದಿಂದ ಅವರು ಬೆಂಕಿ ತಗುಲಿದಂತಾದರು. "ಮಾದೀರುಡ್ಗ ನಮ್ ಚೆಂಬ್ ಮುಟ್ಟಸಿಕೊಂಡಿದ್ದೀಯಾ! ನಮ್ಮಮ್ಮ ಬೈಯ್ತಾಳೆ" ಎಂದು ತನ್ನ ಲಂಗದಲ್ಲಿ ಕಣ್ಣೀರು ಒರೆಸಿಕೊಳ್ಳುತ್ತಾ ಹೇಳಿದಳು. ಆ ಹುಡುಗಿ ಕಿರುಚುತ್ತಾ ಆಚೆ ಓಡಿದ್ದು ಆಗ

ಅನುಭವದ ಗಾಯ...

ಅರ್ಥವಾಯ್ತು. ಆಗ ನಮ್ಮ ಗು...
"ನೀನಾಗ್ಲೆ ಇಲ್ಲೀತನಕ ಬಂದ್ಯಾ, ನಿನ್ ...
ಸುಲ್ದ್ ಬಿಡ್ತೀನಿ, ಬೋಳೀ ಮಗನೆ"
ಆರ್ಭಟಿಸಿ ಮುಖ-ಮೈ ನೋಡದೆ ಚೆ...
ಬಾರಿಸಿದರು. ಹಸಿಕಡ್ಡಿ ತನ್ನ ಹಸಿವನ್ನು ...
ಕೊಂಡು ಮೂಲೆಯಲ್ಲಿ ಬಿದ್ದಿತು. ...
ಕಣ್ಣೀರು ಸುರಿಸುತ್ತಾ ತಲೆಯೆತ್ತಿದೆ ಅ...
ಯಂತೆ. ಆ ಹುಡುಗಿ ಕಣ್ಣೀರು ಬತ್ತುತ್ತಿ...
ನಗೆ ಮೂಡಲು ಯತ್ನಿಸುತ್ತಿತ್ತು.
ಗುರೂಜಿಯವರು ಆ ಹುಡುಗಿಗೆ ನ್ಯಾಯ ...
ಸಿಕೊಟ್ಟ ನೆಮ್ಮದಿಯಲ್ಲಿದ್ದರು.

ಶಾಲೆ, ಪೂಜೆ, ಪ್ರಸಾದ ಎಲ್ಲವನ್ನು ...
ಹಸಿರುಗಟ್ಟಿದ ಬಾಸುಂಡೆ, ಕಣ್ಣೀರಿನೊಂದಿಗೆ ...
ಸೇರಿದೆ. ನನ್ನ ಅವ್ವ ಕಾರಣ ತಿಳಿದು ...
ನ್ನು ಶಪಿಸುತ್ತಾ, ಬಾಸುಂಡೆ ಮೇಲೆ ಕೈ...
ಸುತ್ತಾ; "ಆ ಮುಂಡೇರ ಚೆಂಬ್ನ, ...
ಮುಟ್ಟಾಕೋದೆ'' ಎಂದು ನೀರು ತುಂಬಿದ ...
ಗಳಿಂದ ನನ್ನ ತಲೆಗೂದಲಲ್ಲಿ ಬೆರಳಾಡಿಸಿದ...

ಆದರೆ ಅಂದಿನ ಘಟನೆ, ಬಾಸುಂಡೆ ಮೂ...
ನನ್ನ ಮೇಷ್ಟ್ರು, ಚಾಡಿ ಹೇಳಿದ ನನ್ನ ...
ಮುಖ ಎಂದೂ ನನ್ನ ಮನಸ್ಸಿನಿಂದ ನು...
ಕೊಳ್ಳಲು ಸಾಧ್ಯವಿಲ್ಲ. "ನೀನು ಅಸ್ಪೃ...
"ಮುಟ್ಟಸಿಕೊಳ್ಳದವ'' ಎಂಬ ತಿಳು...
ಯನ್ನು ಎಳೆ ಮನಸ್ಸಿನಲ್ಲಿಯೇ ಇಂತಹ ಬಾ...
ಗಳು ತಿಳಿಸಿದವು!

ನಾತಬೀರುವ ಗ್ಲಾಸಲ್ಲಿ ಕಾಫಿ ಕುಡಿದನೆಂದು..

ಶ್ರೀರಾಮು ಬಿದಕೆ...

ಎರಡು-ಮೂರು ತಿಂಗಳುಗಳ ಕೆಳಗೆ ನಾನು ಊರಿನಲ್ಲಿದ್ದಾಗ ಹರಿಜನ ಯುವಕನೊಬ್ಬನ ಮೇಲೆ ನಡೆದ ಕ್ರೌರ್ಯ ನನ್ನ ಮನಸ್ಸಿನ ಮೇಲೆ ಅಗಾಧ ಪರಿಣಾಮ ಬೀರಿತು. ನಮ್ಮೂರಿನ ಪಕ್ಕದ ಹಳ್ಳಿಯ ಹರಿಜನ ಕೂಲಿಗ ನಮ್ಮೂರಿನಲ್ಲಿ ಆಕಸ್ಮಿಕವಾಗಿ ಬೇರೊಬ್ಬರ ಮನೆಗೆ ಕೂಲಿಗೆ ಬಂದ. ನೋಡಲು ಕಟ್ಟುಮಸ್ತಾದ ಆಳು. ನಾಲ್ಕಾರು ಜನರನ್ನು ಒಟ್ಟಿಗೆ ದಮನ ಮಾಡಬಲ್ಲಷ್ಟು ಶಕ್ತಿವಂತ. ಮೇಲ್ವರ್ಗದ ಸವರ್ಣೀಯರೆನಿಸಿಕೊಂಡಿರುವ ದೌಲತ್ತಿನ ಜನ ಕೇವಲ ತಾವು ಕುಡಿಯುವ ಗಬ್ಬುನಾತ ಬೀರುವ, ಚಕ್ಕೆ ಕಟ್ಟಿದ ಗ್ಲಾಸಿನಲ್ಲಿ ಕಾಫಿ ಕುಡಿದನೆಂದು ತಾರಾಮಾರಾ ಬಡಿದರು. ಪ್ರತಿ ಏಟಿಗೂ ಅವನಿಂದ ಬರುತ್ತಿದ್ದ ಉತ್ತರ, ಆಕ್ರೋಶದ ಕಿಡಿಯದಲ್ಲ; ದೈನ್ಯತೆಯ ಆರ್ತನಾದ.... "ಹೊಡಿಬೇಡಿ ಕಣಣ್ಣಾ...ಗೊತ್ತಿಲ್ದೆ ಈ ಪಾಪ್‌ಗೆಲ್ಸ ಮಾಡ್‌ಬಿಟ್ಟೆ. ಇನ್ನೊಂದಪ ಮಾಡಿದ್ರೆ ಕೈಕಾಲ್‌ಮುರ್ದ್
ಬಿಡ್ರಣ್ಣಾ"ಎಂದು ಮುಗಿಲವರೆಗೆಕೂಗುತ್ತಿ...

ನನಗೆ ಈ ದೃಶ್ಯ ಬಹಳ ಮಾನಸಿಕ ವೇ...
ಗುರಿಮಾಡಿತು. ನಾನು ಪ್ರತಿಭಟಿಸೋಣವೆ...
ನನಗೆ ಸಿಗುವ ಮರ್ಯಾದೆ "ಸುಮ್ನೆ ನಿಂತ್ಕಲ...
ಭೋ ಓದೀವ್'ನೀ ಅಂತ ಹೆಗರಾಡ್ಬೆ...
ಇಷ್ಟೇ. ಸುಮ್ಮನಾದೆ. ಆಗೂ ಈಗೂ ...
ಬಿಡುಗಡೆಯಾಯ್ತು. ದೂರದಲ್ಲಿ ಅವನನ್ನ ...
ಯಾಗಿ "ಪೋಲೀಸ್ ಕಂಪ್ಲೇಂಟ್ ಕೊ...
ಎಂದೆ. "ಬ್ಯಾಡ ಕಣಣ್ಣಾ ಈಗ್ಲೇ ಇಷ...
ಪೋಲೀಸ್-ಗೀಲೀಸ್ ಅಂತ ಹೋದ್ರೆ ...
ಜೀವ ಬಿಟ್ಟಾರಾ? ನಾಳೆ ಜೀವ ತೇ...
ಯಾರಾತ್ರ ಕೂಲಿಗೋಗ್ಲೀ?'' ಪ್ರಶ್ನೆಯಾ...

ನಮ್ಮ ಈ ಜಡಗಟ್ಟಿದ ನೆಲದಲ್ಲಿ, ಬರ...
ಹೊಲೆಯನ ಬದುಕಿನಲ್ಲಿ ತನ್ನ ನೋವನ್ನು, ...
ರನ್ನು ವ್ಯಕ್ತಪಡಿಸಲಾರ, ಅಷ್ಟು ಗಾತ್ರದ ...
ಎಷ್ಟು ಬೇಗ ಕಮರಿಹೋಯಿತು ಎಂಬುದು ...
ತ್ತಿನ ಜನರ ಶೋಷಣೆಯಒಂದು ಮುಖವ...

...ನಕ್ಷತ್ರಗಳ ಬೆಳಕಲ್ಲಿ.....

...ಹಿಂದಿನ ಸಂಚಿಕೆಯಲ್ಲಿ ಪ್ರಕಟವಾದ ಬಿ. ಆರ್. ಗೋಪಮ್ಮ ಅವರ 'ಕೊಡಗಿನ ಕುರೂಪ ದರ್ಶನ'ಕ್ಕೆ ಸಂಬಂ...ಸಿದ ಲೇಖನವಿದು. ಅದರಲ್ಲಿ ಕೊಡಗಿನ ನೋವಿನ ಬದುಕಿಗೆ ಸಂಬಂಧಿಸಿದ ಘಟನೆಗಳನ್ನು ವಿವರಿಸಿದರೆ, ಇಲ್ಲಿ ...ವರು ಶಿಕ್ಷಣ ಪಡೆದುದರ ಹಿನ್ನೆಲೆಯನ್ನು ವಿವರಿಸಿದ್ದಾರೆ.

ನಾವೆಲ್ಲ ಶಾಲೆಯ ದರ್ಶನ ಪಡೆಯಬೇಕಾದರೆ ...ಲ್ಕೈದು ಮೈಲಿ ದೂರ ಹೋಗಬೇಕಿತ್ತು. ...ನಮ್ಮಂತರ ಮಕ್ಕಳು ನಮ್ಮ ವಾರಿಗೆಯವ...ದರೂ 'ಗತಿಯಿಲ್ಲದವರು' ಎಂಬ ಅಪಮಾನದ ...ಮಾತುಗಳನ್ನು ಕೇಳಬೇಕಿತ್ತು. ನಾವು ಹೈ...ಸ್ಕೂಲಿಗೆ ಹೋಗುವಾಗ ಬರುವಾಗ ಅನೇಕ ...ಎಸ್ಟೇಟುಗಳನ್ನು ದಾಟಿ ಹೋಗುತ್ತಿದ್ದೆವು. ...ಹೋಗುವಾಗಿನ ದಾರಿಯನ್ನು ಮರಳಿ ಬರುವಾಗ ...ಬಳಸದೆ ಬೇರೆ ದಾರಿಯಿಂದ ಬರುತ್ತಿದ್ದೆವು. ...ಕೆಂದರೆ ಹಗಲು ಹೊತ್ತು ಹೋಗುವಾಗ ...ನೋಡಿದ ಎಸ್ಟೇಟುಗಳೊಡೆಯರು ಬರುವಾಗ ...ತ್ಲಾಗುವುದನ್ನು ತಿಳಿದು ಹೊಂಚುಹಾಕಿ ...ಮಾಡುವುದು ನಮಗೆಲ್ಲ ಗೊತ್ತಿರುವ ವಿಷಯ...ವಾಗಿತ್ತು. ಒಂದೊಂದು ಸಲ ವಿದ್ಯಾಲಯದಲ್ಲಿ ...ಸಿನೇಮ ತೋರಿಸುವ ದಿನ ಮುಂದಿನ ಭಯ...ವನ್ನೂ ಮರೆತು ನೋಡಿ ರಾತ್ರಿ ೧೨ಗಂಟೆಗೆ ಬರು...ತ್ತಿದ್ದೆವು. ರಾತ್ರಿ ೮ಗಂಟೆ ಹೊತ್ತಿಗೆನೆ ದಟ್ಟ ಅರ...ಣ್ಯದ ಮಧ್ಯ ನಡುರಾತ್ರಿ ಅನಿಸುತ್ತಿತ್ತು. ೧೨ ...ಗಂಟೆ ಹೊತ್ತಿಗಂತೂ ಜೀವವನ್ನು ಕೈಲ್ಲಿ ಹಿಡಿದು...ಕೊಂಡೇ ನಕ್ಷತ್ರಗಳ ಬೆಳಕಲ್ಲಿ ನಡೆಯುತ್ತಿದ್ದೆವು. ...ಕಾಡು ಹಾದಿಯ ಹುಲ್ಲಿನ ಸಂದಿಗಳಲ್ಲಿ ಹರಿದಾ...ಡುವ ಹಾವುಗಳು, ತುಳಿದು ಜಜ್ಜಿಹಾಕುವ ಆನೆ...ಗಳು ಏರಿ ಬರುವ ಕಾಡುಹಂದಿಗಳ ಭಯ. ನಡೆದ ...ಇಂಥ ಅನೇಕ ಘಟನೆಗಳು ,ದುರ್ಮರಣಕ್ಕೀಡಾದ...ವರು ನೆನಪಾಗಿ, ದೆವ್ವಗಳ ಭ್ರಮೆಯುಂಟಾಗಿ, ...ಶಾಲೆಯಲ್ಲಿ ತಡಮಾಡಿದ್ದಕ್ಕಾಗಿ ಹೊಡೆತ ತಿನ್ನುವ ...ರ ಕಲ್ಪನೆಯಿಂದಾಗಿ ಬೆವತು ಹೋಗುತ್ತಿದ್ದೆ.

ನಾನು ೯ನೆಯ ತರಗತಿಯಲ್ಲಿ ಓದುತ್ತಿದ್ದಾಗ ...ಇಂಗ್ಲಿಷ್ ಪಾಠ ಹೇಳಿಸಿಕೊಳ್ಳುವುದಕ್ಕಾಗಿ ನನ್ನ ...ತಂದೆ ಒಬ್ಬರ ಮನೆಗೆ ಕಳಿಸಿದ್ದರು. ಒಂದು ವಾರ ...ಅಲ್ಲಿಯೇ ಇರಬೇಕೆಂದು ತಂದೆಯ ಆಜ್ಞೆ. ಒಬ್ಬರು ...ಎಷ್ಟು ಹೊರಲು ಸಾಧ್ಯವೋ ಅಷ್ಟೊಂದು ತರ...ಕಾರಿ ಮತ್ತು ಹಣ್ಣನ್ನು ಅವರಿಗೆಕೊಟ್ಟು ನನ್ನನು ...ಬಿಟ್ಟಿದ್ದರು. ಅಲ್ಲಿ ನನ್ನ ಗುರು ಎಸ್. ಎಸ್. ...ಎಲ್.ಸಿ. ಫೇಲಾಗಿರುವ ಹುಡುಗಿ. ಆಕೆಯ ...ತಂಗಿ ನನ್ನ ಕ್ಲಾಸ್‌ಮೇಟ್ ಆಗಿದ್ದರಿಂದ ನಮಗಿ...ಬ್ಬರಿಗೂ ಪಾಠ ಹೇಳಿಕೊಡುತ್ತಿದ್ದಳು. ಕಲಿಯು...ವುದರಲ್ಲಿ ಆಕೆಯ ತಂಗಿ ನಿಧಾನಗತಿಯವಳು. ...ತಂಗಿ ಬಳಕ್ಕನಿಗೆ ಅದೇಕೋ ಹೊಟ್ಟೆ ಕಿಚ್ಚು ಬಂತೆಂದು ...ಕಾಣುತ್ತದೆ. ನನಗೆ ಪಾಠ ಹೇಳುವುದನ್ನು ನಿಲ್ಲಿಸಿ, ...ತೋಟದ ಗಿಡದ ಕಳೆ ಕೀಳಿಸುವುದು, ಮನೆಗುಡಿಸು...ವುದು, ಇತ್ಯಾದಿ ಕೆಲಸಗಳನ್ನು ಕೊಟ್ಟು ಸಮಯ ಕಳೆಯಲು ಪ್ರಯತ್ನಿಸುತ್ತಿದ್ದಳು. ನಾನು ಕಳೆ ಕೀಳುವುದನ್ನು ನಿರಾಕರಿಸಿದ್ದಕ್ಕೆ, ಆಕೆ ನನ್ನ ಕೆನ್ನೆಗೆ ಹೊಡೆದ ಏಟನ್ನು ನಾನು ಹೇಗೆ ಹಿಂದಿರುಗಿಸಲಿ? ರಾತ್ರಿ ಮಲಗಲು ಹರಿದು ಚಿಂದಿಯಾದ ಚಾಪೆಯನ್ನೂ ಕೋಳಿಗೂಡಿನ ಮೇಲೆ ಎಸೆದಂಥ ಹರಕು ಕಂಬಳಿಯನ್ನೂ ಕೊಟ್ಟರು. ನಾವು ಬಡವರಾಗಿದ್ದರೂ ನನ್ನ ತಾಯಿ ಸ್ವಚ್ಛಗೆ-ಬೆಚ್ಚಗೆ ಇರಿಸಿದ್ದರು. ಈ ನನ್ನ ಮೊದಲ ಅನುಭವ ನನಗೆ ಅಳು ತಂದಿತು. ಕೋಳಿಯ ಹೇನುಗಳಿಂದ ಹರಕು ಕಂಬಳಿ ತುಂಬಿ ಹೋಗಿದ್ದರಿಂದ ಹೊದ್ದುಕೊಂಡರೆ ಹೇನುಗಳ ಕಾಟ, ಬಿಸಾಕಿದರೆ ಮೈಕೊರೆಯುವ ಚಳಿ ಹೀಗಾಗಿ ನನ್ನ ವಿದ್ಯಾಭ್ಯಾಸವನ್ನೂ ತಂದೆಯನ್ನೂ ಶಪಿಸುತ್ತ ರಾತ್ರಿ ಕಳೆಯುತ್ತಿದ್ದೆ. ನಾನು ಓಡಿ ಮನೆಗೆ ಬರಬಹುದಾಗಿತ್ತು. ಆದರೆ 'ಹಾಗೆ ಬಂದು ಬಿಡಬೇಡ ಕಳ್ಳತನ ಮಾಡಿ ಬಂದಳೆಂಬ ಅಪವಾದ ಬರುತ್ತದೆ' ಎಂದು ನನ್ನ ತಾಯಿ ಹೇಳಿದ ಮಾತು ನೆನಪಾಗಿ ಹಾಗೇ ದಿನ ಕಳೆಯುತ್ತಿದ್ದೆ ಕೊನೆಗೂ ನನ್ನನ್ನು ಕರೆದುಕೊಂಡು ಹೋಗಲು ಅಪ್ಪ ಬಂದಾಗ ನನ್ನ 'ಮೇಡಂ'"ಈಕೆ ಸೋಮಾರಿ, ಪಾಠ ಹೇಳಿಸಿ ಕೊಳ್ಳುತ್ತಿರಲಿಲ್ಲ ಅದಕ್ಕಾಗಿ ಎರಡು ಏಟು ಕೊಟ್ಟೆ' ಎಂದು ಹೇಳಿ ಆಕೆ ಎದುರಿನಲ್ಲೇ ಅಪ್ಪ ನನ್ನನ್ನು ಹೊಡೆಯುವಂತೆಮಾಡಿ ತೃಪ್ತಿಪಟ್ಟಳು.

ಅದೇ ಮನೆಯಲ್ಲಿ ವಂಶಪರಂಪರೆಯಾಗಿ ಜೀತಕ್ಕಿದ್ದ ಮಲೆಯಾಳಿ ಕುಟುಂಬದ ಗೋಪಾಲನೆಂಬ ಹುಡುಗನೊಬ್ಬ ನನ್ನೊಂದಿಗೆ ಎಸ್.ಎಸ್.ಎಲ್. ಸಿಯ ವರೆಗೆ ಓದಿದ. ಆತನನ್ನು ಶಾಲೆ ಬಿಡಿಸಿ ತೋಟದ ಕೆಲಸಕ್ಕೆ ಕಳಿಸುವಂತೆ ಯಜಮಾನರ ಒತ್ತಾಯ, ಆದರೆ ಓದುವುದರಲ್ಲಿ ಜಾಣನಾಗಿದ್ದ ಆ ಸುಂದರ ಧೃಢಕಾಯದ ಕಿರಿಯ ಮಗನನ್ನು ತುಂಬಾ ಓದಿಸಬೇಕೆಂಬ ಆಸೆಯಿಂದ ಆತನ ಮುಪ್ಪಿನ ತಾಯಿ-ತಂದೆ ಮತ್ತು ಅಣ್ಣಂದಿರು ಕಷ್ಟಪಡುತ್ತಿದ್ದರು. ಕೊನೆಗೂ ಆತನಿಗೆ ಮುಂದೆ ಓದಲಾಗಲಿಲ್ಲ. ಮೈಸೂರಿನಲ್ಲಿ ಓದುವ ಯಜಮಾನನ ಮಕ್ಕಳು ರಜೆಗೆ ಬಂದಾಗ ಹೊಡೆತ ಬೈಗುಳಗಳಿಂದ ಅವನನ್ನು ಅಪಮಾನಗೊಳಿಸುತ್ತಿದ್ದರು.

ನಾನು ಪಿ.ಯು. ಸಿ. ಓದುತಿದ್ದಾಗ ಆತ ತನ್ನ ಅಳಲನ್ನು ತೋಡಿಕೊಂಡಿದ್ದ. 'ನನ್ನಿಂದ ಓದಲು ಆಗಲಿಲ್ಲ, ಓದಲೂ ಬಿಡಲಿಲ್ಲ ನೀನಾದರೂ ಚೆನ್ನಾಗಿ ಓದಿ ಮುಂದೆ ಬಾ' ಎಂದು ಆತ ಹೇಳುವಾಗ ಕೊಡಗಿನ ಸೌಂದರ್ಯ ಸವಿಯುವವರಿಗೆ ಅದರ ಕುರೂಪದ ದರ್ಶನವಾಗುವುದೆ?

ಕಾವ್ಯದ ಬೆಳಕು

ಹರಿಸದಿದ್ದರೆ ನಮ್ಮ ಕಾವ್ಯ
ಮನೆ ಮನೆಗೆಲ್ಲ ಬೆಳಕು
ಆಗುವುದು ಹುರುಳಿಲ್ಲದ್ದು
ಅಂದ-ಚಂದ, ಧ್ವನಿಯಿಲ್ಲದ್ದು

—ಮುಹಮ್ಮದ್ ದರ್ವಿಶ್
ಪ್ಯಾಲೇಸ್ತಾನಿ ಕವಿ

ಜೈಲಿನಿಂದ ಒಂದು ಪತ್ರ

ಅವ್ವಾ
ನನಗೆ ನೋವಾಗುತ್ತಿದೆಯವ್ವಾ
ನನ್ನ ಗೆಳೆಯರೆಲ್ಲಾ ಬಂದು ನಿನಗೆ
ನನ್ನ ಬಗ್ಗೆ ಕೇಳಿದಾಗ –
ನೀನು ಅಳುವದನ್ನು ನೆನೆಸಿಕೊಂಡಾಗ....

—ಸಮೀ ಅಲ್ ಕಾಸಿಮ್
ಪ್ಯಾಲೆಸ್ತಾನದ ಗೆರಿಲ್ಲಾ ಕವಿ

ನಾನೇ ಲೆನಿನ್

"ಭೂಗೋಳದ ಮೂಲೆಗಳಲ್ಲೆಲ್ಲ ಕೇಳುತಿದೆ
ಲೆನಿನ್ ಹೆಜ್ಜೆ ಸದ್ದು....
ನನ್ನ ರಕ್ತದೊಳಿಂದು ಜೀವಂತ ಲೆನಿನ್!
ನಿರ್ವೀರ್ಯ ಸಾನಲ್ಲ
ನನ್ನ ಹೃದಯದಲಿ ಮಿಡಿಯುತಿದೆ ಬಂಡಾಯ
ಅನಿಸುತಿದೆ ನನಗೆ
ನಾನೇ ಲೆನಿನ್!"


(೧೭ ವರ್ಷದ ಹುಡುಗ ಸುಕಾಂತ ಭಟ್ಟಾಚಾರ್ಯ ೧೯೪೩ರಲ್ಲಿ ಬರೆದದ್ದು. ೪ ವರ್ಷಗಳ ನಂತರ ಈ ಯುವಕವಿ ಅಕಾಲಮೃತ್ಯುವಿಗೆ ತುತ್ತಾದರು.)

○

ಮಾನವ ಆತ್ಮವನ್ನು ಕ್ರೂರ ಯಾತನೆಯ ವಿಭಜನೆಗೆ ಗುರಿ ಮಾಡಿರುವ ಜಗತ್ತನ್ನು ನಾಶ ಮಾಡುವುದು- ಸಮಾಜವಾದಿ ಕ್ರಾಂತಿ ಉಂಟು ಮಾಡುವುದು ಇದನ್ನೇ. ಮಾನವೀಯತೆಯೆ ಈ ಕ್ರಾಂತಿಯ ಸಾರಸರ್ವಸ್ವ. ಮಾನವೀಯತೆಯನ್ನು ಕ್ರಾಂತಿಯಿಂದ ಪ್ರತ್ಯೇಕಿಸಿದಲ್ಲಿ ಅದು ನೈಜ ಮಾನವೀಯತೆಯಾಗದು. ಅಂತೆಯೆ ಕ್ರಾಂತಿಯನ್ನು ಮಾನವೀಯತೆಯಿಂದ ಪ್ರತ್ಯೇಕಿಸಿದಲ್ಲಿ ಅದು ನೈಜ ಕ್ರಾಂತಿಯಾಗದು.

[ಬೋರಿಸ್ ಬ್ಯಾಲಿಕ್, 'ತಾಯಿ' ಕಾದಂಬರಿಯನ್ನು ಕುರಿತು ಬರೆದಾಗ ವ್ಯಕ್ತಪಡಿಸಿದ್ದು.]

ಇರಾನ್ ಸಾಹಿತ್ಯಲೋಕದ ಕ್
ಸುಲ್ತಾನಪೂ



ಈ ದೇಶದ ಸೆರೆಮನೆ

ಓ ಗೆಳೆಯ
ಕೋಳ ತೊಡಿಸಿಕೊಂಡ ಸೋದರ
ಕನಸು, ಚಿಂತನೆಗಳ ಕಗ್ಗೊಲೆಯ ಈ ಮನೆಯಲ್ಲಿ
ರಕ್ತ, ಉಕ್ಕು, ದುಡಿಮೆಯ ಬಯಲಿನ ಮೇಲೆ
ಮುತ್ತು, ಮೀನುಗಳ ಸಾಗರದ ತೀರದ ಮೇಲೆ
ದಂಡಿನ ಎಣ್ಣೆಯ ಬಂದರಿನಲ್ಲಿ
ಯುದ್ಧದ ಹಡಗುಗಳಲ್ಲಿ
ಭತ್ತ ಟೀ ಗೋದುಮೆಯ ಭೂಮಿಯಲ್ಲಿ
ಕುರಿಮಂದೆಯ ಸಂದಿಗಳಲ್ಲಿ
ಓ ಗೆಳೆಯ, ಕೋಳ ತೊಡಿಸಿಕೊಂಡ ಸೋದರ
ನಾವು :
ಬರಲಿರುವ ಬಿರುಗಾಳಿಯ ಕೂಡಿಕೊಂಡ ಮೋಡಗಳು
ಇದ್ದಕಿದ್ದಂತೆ ಎದ್ದೇಳುವ ಬಿರುಗಾಳಿಯ
ಸಂಗೀತಗಳು
ಕಜೆಲ್‌ಕೊಟೇ ಓಯಿ ಹಸಾರ್‌ಗಳ *
ಕೊರೆಯುವ ಕತ್ತಲ ಕೋಣೆಯಲ್ಲಿದ್ದರೂ
ನಾವು ಸೊರಗಿದ ಸೆರೆಯಾಳುಗಳಲ್ಲ.
ಬಂದಿಗಳು ಬೇರೆ, ಸೆರೆಮನೆಗಳೇ ಬೇರೆ.
ಈ ನೆಲದ ಬಂದಿಗಳು ಯಾರೆಂದರೆ :–
ಕಾರ್ಖಾನೆ ಹೊಲಗಳಲ್ಲಿ ಸುತ್ತಿದ ಸರಪಳಿಗಳಲ್ಲಿ
ಯಜಮಾನರ ಸುಖಕ್ಕಾಗಿ ಜೀವಗಳನು ತೇದವರು.
ಬೆವರು ಸುರಿಸಿ ಬೆಂದವರು ಈ ನೆಲದ ಬಂದಿಗಳು
ಬಂದೂಕ ಬಂಗಾರ ಗೂಢಾಚಾರರು
ಈ ದೇಶದ ರಾಜರು.
ಗುಡ್ಡೆ ಗುಡ್ಡೆಯಾಗಿ ಚೆಲ್ಲಿ ಹೋದ ಮನೆಗಳು
ಈ ನಾಡಿನ ನಿಜವಾದ ಜೈಲುಗಳು
ಸ್ವಾತಂತ್ರ್ಯದ ಕೂಗಿನಲ್ಲಿ ಮತ್ತು ಗುಲಾಮಗಿರಿಯಲ್ಲಿ
ಇಕ್ಕಟ್ಟಿಗೆ ಸಿಕ್ಕಿದೆ ಇರಾನ್
ಎಂದೆಂದೂ ಸಾವು :
ಬಿರುಗಾಳಿಯ ಒಂದಾಗುವ ಮೋಡಗಳು
ನುಗ್ಗಿ ಬರುವ ಬಿರುಗಾಳಿಯ ರಭಸದ ಸಂಗೀತಗಳು
ಧಗ ಧಗಿಸುವ ಬೆಂಕಿಯ ಬೆಳಕಿನಲ್ಲಿ
ನಮ್ಮ ಚರ್ಮಕ್ಕಂಟಿದ ಗಾಯಗಳ
ಸುಡುವ ಎದೆಯ ಹಾಡಿನೊಂದಿಗೆ
ಕತ್ತಲ ಕೋಣೆಯ ಗೂಡಿನಿಂದ
ಬಿಡುಗಡೆ
ಓ ರಕ್ತ ಸಿಕ್ತ ಪರಿವರ್ತನೆಯೇ
ಓ ಮುಂಗಾಣುವ ಕ್ರಾಂತಿಯೇ

ಮೂಲ : ಸಯೀದ್ ಸುಲ್ತಾನಪೂರ್
ಕನ್ನಡಕ್ಕೆ : ಸಿದ್ದಲಿಂಗಯ್ಯ

* ಇರಾನಿನ ಮೂರು ಕುಪ್ರಸಿದ್ಧ ಜೈಲುಗಳು

ಇರಾನ್ ಸಾಹಿತ್ಯ ಲೋಕದಲ್ಲಿ ಕ್ರಾಂತಿಯ ಬಿರುಗಾಳಿ ಬೀಸುವಂತೆ ಮಾಡಿದ ಬಂಡಾಯ ಕವಿ ಸಯೀದ್ ಸುಲ್ತಾನಪೂರ್

"ನನ್ನ ಇರಾನ್
ಮರೆತು ಹೋದ ಕ್ರಾಂತಿಗಳ ಇರಾನ್,
ಸೋತು
ಸ್ತಬ್ಧವಾಗಿ
ಏಸಿಯಾದ ಕೋಲಾಹಲದ ಮಧ್ಯ ಮಲಗಿದ
ಹಸಿದ ಸಿಂಹ"

ಎಂದು ಹಾಡಿ ಇರಾನ್ ಅನ್ನು ಕ್ರಾಂತಿಯ ಕುದಿತಕ್ಕೊಳಪಡಿಸಿ, ಚಿತ್ರಹಿಂಸೆಯ ತಾಪದಲ್ಲಿ ಸುಡುತ್ತ, ತೊಟ್ಟಿಕ್ಕುವ ರಕ್ತದ ಹನಿಗಳಲ್ಲಿ ಉರಿಯುತ್ತಿರುವ ಸೂರ್ಯ ಕೋಟೆಯನ್ನು ತೋರಿಸುತ್ತ ಭೂಮಂಡಲದ ಎಲ್ಲಾ ಬಂಡಾಯ ಕವಿಗಳಿಗೆ ಸ್ಫೂರ್ತಿಯ ಸೆಲೆಯಾದ ಸಯೀದ್ 1940ರಲ್ಲಿ ಕೂಲಿ ಕುಟುಂಬವೊಂದರಲ್ಲಿ ಜನಿಸಿ, ಚರಂಡಿ ಪಕ್ಕದಲ್ಲಿ ಬೆಳೆದು ಬಂದವರು. ಅಂತೆಯೆ ಅವರಿಗೆ ಜನರ ತುಡಿತವನ್ನು ಅರ್ಥ ಮಾಡಿಕೊಳ್ಳುವಲ್ಲಿ ಬಹಳ ಸಮಯ ಬೇಕಾಗಲಿಲ್ಲ.

ಹೈಸ್ಕೂಲು ಶಿಕ್ಷಣ ಮುಗಿದ ಮೇಲೆ ಹಿಂದುಳಿದ ಪ್ರದೇಶವಾದ ತೆಹರಾನದ ದಕ್ಷಿಣದಲ್ಲಿ ಶಿಕ್ಷಕ ಕೆಲಸಮಾಡುತ್ತ ಜನತೆಗೆ ವರ್ಗ ಸಂಘರ್ಷದ ಪಾಠಗಳನ್ನು ಕಲಿಸಿಕೊಟ್ಟರು. ಸಯೀದ್ ಸದಾ ಜನತೆಯ ಮಧ್ಯ ಇದ್ದವರು. ಶಿಕ್ಷಕರ ಹೋರಾಟಕ್ಕೆ ಬೃಹತ್ ರೂಪ ಕೊಟ್ಟು ಮುನ್ನಡೆಸಿದವರು. ವಿದ್ಯಾರ್ಥಿ ಚಳುವಳಿಯಂತೂ ಅವರ ಜೀವನದ ಒಂದು ಅವಿಭಾಜ್ಯ ಅಂಗ. ಇರಾನದ ಶಹಾನ ಗುಪ್ತ ಪೋಲೀಸ್ ದಳವಾದ ಸವಾಕ್ 1967ರಲ್ಲಿ ವಿಶ್ವ ವಿಖ್ಯಾತ ಕುಸ್ತಿಪಟು ಒಲಂಪಿಕ್ ಚಾಂಪಿಯನ್ ತಖ್ತಿಯನ್ನು ಕೊಲೆ ಮಾಡಿದಾಗ; ಅಂತ್ಯ ಸಂಸ್ಕಾರದ ವೇಳೆಯಲ್ಲಿ ಇಡೀ ಜನ ಸಮೂಹವನ್ನು ಸಂಘಟಿಸಿ ಹೋರಾಟಕ್ಕಿಳಿಸಿ ಶಹಾನ ದುರಾಡಳಿತವನ್ನು ಬಯಲಿಗೆಳೆದಾಗ ಕೇವಲ 27 ವರ್ಷದ ತರುಣ.

1966ರ ಕವಿ ಸಮ್ಮೇಳನವೊಂದರಲ್ಲಿ; ಸುಲಿಗೆಗೊಳಪಟ್ಟ ಜನಸಾಮಾನ್ಯರ ಬವಣೆ ಮತ್ತು ಸಾಮ್ರಾಜ್ಯವಾದದ ಕೈಗೊಂಬೆಯಾಗಿದ್ದಂಥ ಶಹಾನ ಆಡಳಿತ ವೈಖರಿಯ ಬಗ್ಗೆ ಕ್ರಾಂತಿ ಕವನಗಳನ್ನೋದಿ, ನಾಟಕಗಳನ್ನಾಡಿ ಇರಾನ್ ಸಾಹಿತ್ಯದಲ್ಲಿ ಹೊಸ ಯುಗವನ್ನು ಸೃಷ್ಟಿಸಿದವರು. ಶಹಾನ ರಾಜ್ಯದಲ್ಲಿ ಕೆಂಡದುಂಡೆಯಾಗಿ ಬೆಳೆಗು ಜನತೆಯನ್ನು ಶೋಷಣೆ, ದಬ್ಬಾಳಿಕೆಯ ವಿರುದ್ಧ ಸಂಘಟಿಸುವುದು ಸವಾಕ್‌ಗೆ ಸಹಿಸಲಾಗಲಿಲ್ಲ. ದೇಶದ್ರೋಹಿಯೆಂದು ಅಪಾದನೆ ಹೊರಿಸಿ ಹಿಂಸೆಗೊಳಪಡಿಸಲು ಶುರುಮಾಡಿತು. ಸಯೀದ್ ಭೂಗತರಾಗಿದ್ದಾಗ್ಯೂ ಜನತೆಯ ಸಂಪರ್ಕವನ್ನು ಕಳೆದುಕೊಳ್ಳಲಿಲ್ಲ. ಜನತೆಯ

ಹೋರಾಟದ ಇತಿಹಾಸವನ್ನೇ ನಿ
ತ್ತ, ಇರಾನ್ ಜನತೆ ಕೊನೆಗೂ ಫೆ
1979ರಂದು ನಾಚಿಕೆಗೆಟ್ಟ ಶಹಾನ ಅ
ವನ್ನು ಕೊನೆಗೊಳಿಸಿತು. ಆದರೆ
ಬದಲು ಜನತೆಗೆ ಬಂದದ್ದು ಇಸ್ಲಾಂ
ನಲ್ಲಿ ಸೈತಾನನ ಸರ್ಕಾರ. ಈ ಎರಡೂ
ವ್ಯವಸ್ಥೆಗಳ ವಿರುದ್ಧ ಹುತಾತ್ಮ ಸಯಿ
ಸುಲ್ತಾನಪೂರ್ ಕೊನೆಯ ಗಳಿಗೆಯ
ಹೋರಾಡಬೇಕಾಯಿತು. ಈ ಕ್ರಾಂ
ಕವಿಯನ್ನು ಶಹಾ ಸಾವಿನಂಚಿನಲ್ಲಿ
ದರೆ, ಖೊಮೇನಿ ಸಾವಿನ ದವಡೆಗೆ ತ

'ಖೊಮೇನಿಯಿಂದ ಜನತೆ ಬಯ
ನು? ಪಡೆದದ್ದೇನು?' ಧರ್ಮ
ಹೃದಯದಲ್ಲಿ ಫ್ಯಾಸಿಸ್ಟ್ ರಕ್ತ ಹ
ತ್ತಿದೆ ಎಂಬುದಕ್ಕೆ ಇರಾನ್ ಸಾಕ್ಷಿ
ನಿಂತಿದೆ. ಮಾನವೀಯ ಮೌಲ್ಯಗ
ಕಾಮ್ರೇಡ್ ಸಯೀದ್ ಸುಲ್ತಾನ
ಶಹಾನ ಸಾಮ್ರಾಜ್ಯದ ವಿರುದ್ಧ ಹ
ಡಿದ ರೀತಿಯಲ್ಲೇ ಮತಾಂಧ ಸಾಮ್ರಾ
ವಿರುದ್ಧವೂ ಹೋರಾಡಿ ಅಮರರಾಗಿ

ಪ್ರತಿಯೊಂದು ಚಳುವಳಿಯಲ್ಲಿ ಭಾಗವ
ದನ್ನು ನಿಲ್ಲಿಸಲಿಲ್ಲ.

ಕ್ರಾಂತಿಕಾರಿ ಕವಿಯೊಬ್ಬ ತಾನು
ರಾಜಕೀಯ ನಿಲುವಿಗೆ ಬದ್ಧನಾಗಿಯೇ ಇ
ನೆ. ಸಯೀದ್ ಇರಾನ್ ಜನತಾ ಫೆದಾಯಿ
ಲ್ಲಾಗಳ ಸಂಘಟನೆಯ ನಾಯಕನಾಗಬ
ಗಿತ್ತು. ಆದರೆ ಎಂಥ ಪ್ರಸಂಗದಲ್ಲೂ ತಾ
ಬರಹಗಾರ; ತನಗೆ ಸಾಂಸ್ಕೃತಿಕ ಕ್ಷೇ
ಮಾಡಬೇಕಾದ ಬೇರೆ ಮಹತ್ವದ ಕೆಲ
ಎಂಬುದನ್ನು ಮರೆಯಲಿಲ್ಲ.

ಜನ ಜಾಗೃತಿಯಲ್ಲಿ ಸಮೂಹ ಮಾಧ್ಯ
ಮಹತ್ವದ ಪಾತ್ರವನ್ನು ವಹಿಸುತ್ತವೆ
ದನ್ನು ಅವರು ಸರಿಯಾಗಿ ಮನಗಂಡಿ

ರಂಜಾನ್ ದರ್ಗಾ

...ಯು ಬಿರುಗಾಳಿ

...ರು ಅನಾಹಿತಾ ಕಲಾ ಸಂಸ್ಥೆಯಲ್ಲಿ ಪದವಿ ...ದುಕೊಂಡು ಅಲ್ಲಿಯೇ ೧೯೬೦ರಿಂದ ೬೫ರ ...ಗೆ ಅನಾಹಿತಾ ಸಮೂಹ ಮಾಧ್ಯಮದಲ್ಲಿ ಕಲಾ ...ರಾಗಿ ದುಡಿದರು. ತೆಹರಾನ ವಿಶ್ವವಿದ್ಯಾನಿಲ ...ದ ಲಲಿತ ಕಲಾ ಮಹಾವಿದ್ಯಾಲಯದಲ್ಲಿ ವೈ ...ನಿಕವಾಗಿ ಸಮೂಹ ಮಾಧ್ಯಮಗಳ ಜ್ಞಾನ ...ದರು.

...ತಿಕೋವ್‌ನ "ಮೂವರು ಸಹೋದರಿಯರು' ...ಹೆಂಜೋಸ್‌ನ "ಎದುರಿಸುವ ಸಾವು", ...ನ್‌ನ "ಜನತೆಯ ವೈರಿ", ಮೋಹಸೀನ್‌ನ ...ಕ್ಷಕರು" ಬ್ರೆಕ್ಟನ "ಸಿಮೋನ್ ಮಜರ್ಡನ ...ಕೋನ" ಮತ್ತು ಗಾರ್ಕಿಯ "ಪುಟ್ಟ ...ಡವಾಳಶಾಹಿ" ಇವರು ನಿರ್ದೇಶಿಸಿದ ಮುಖ್ಯ ...ಟಕಗಳು. "1968ರಲ್ಲಿ "ಇರಾನಿ ಸಮೂಹ ...ಧ್ಯಮ ಸಮಾಜ" ಸ್ಥಾಪಿಸಿದರು. ಈ ನಾಟಕ ...ನ್ನು ಆಡುವಾಗಲೆಲ್ಲ ಸವಾಕ್‌ದಿಂದಾಗಿ ತೀವ್ರ ...ಂದರೆಗೊಳಗಾಗುತ್ತಿದ್ದರು. ಏಕೆಂದರೆ ಅವರ ...ಟಕಗಳ ಮುಖಾಂತರ ಬಂಡವಾಳಶಾಹಿ ...ಾಜದ ಕ್ರೌರ್ಯವನ್ನು ಹೊರಗೆಡುತ್ತಿದ್ದರು. ...ದೆ ಸುಲಿಗೆ ವ್ಯವಸ್ಥೆಯ ಗುಲಾಮರಂತೆ ವರ್ತಿ ...ರ ಪತ್ರಕರ್ತರನ್ನು ಗೇಲಿ ಮಾಡುತ್ತಿದ್ದರು.

...ಸಯೀದ್ ಅವರ ಕವಿ ಸಮ್ಮೇಳನಗಳು ಇರಾ... ವ್ಯವಸ್ಥೆಯ ದುಷ್ಟತನವನ್ನು ಹೊರಗೆಳೆಯು... ...ರಲ್ಲಿ ಮಹತ್ವದ ಪಾತ್ರ ವಹಿಸಿದವು. ಶಹಾನ ...ಮ್ರಾಜ್ಯವನ್ನು ನಡುಗಿಸಿದವು. ಹೀಗಾಗಿ ...ಾಕ್ ಪೋಲೀಸರು ಅನೇಕ ಸಲ ಅವರ ಕವಿ ...ಮ್ಮೇಳನ ಮತ್ತು ನಾಟಕಗಳಿಗೆ ಮುತ್ತಿಗೆ ...ಕುತ್ತಿದ್ದರು. 1970ರಲ್ಲಿ "ಶಿಕ್ಷಕರು" ...ಟಕಕ್ಕಾಗಿ ಸುಲ್ತಾನಪೂರ್ ಜೈಲು ಸೇರ ...ಕಾಯಿತು. ಆದರೆ ಜನತೆಯ ಕೋಪಕ್ಕೆ ...ಣಿದು ಸರ್ಕಾರ 3 ತಿಂಗಳೊಳಗಾಗಿ ಬಿಡುಗಡೆ ...ಾಡಿತು. ಇದೇ ವೇಳೆಯಲ್ಲಿ "ನಾಶ ...ಾಂದುತ್ತಿರುವ ಧ್ವನಿ" ಎಂಬ ಕವನ ಸಂಕಲನ ...ನ್ನೂ "ಕುಮಾರ ಹಸನ್" ಎಂಬ ನಾಟಕ ...ನ್ನು ಪ್ರಕಟಿಸಿದರು.

...ಸಮೂಹ ಮಾಧ್ಯಮಗಳನ್ನು ಲಾಭದಾಶೆಯ ...ಡವಳಶಾಹಿಗಳು ಕೈಗೊಂಬೆಗಳನ್ನಾಗಿ ...ಾಡಿಕೊಂಡಂಥ ಸಮಯದಲ್ಲಿ ಸುಲ್ತಾನಪೂರ್ ... ಮಾಧ್ಯಮಗಳನ್ನು ಜನತೆಯ ಮುಖವಾಣಿ ...ಾಗಿಸಲು ಹೆಣಗಿದರು.

...197)ರಲ್ಲಿ "ಒಂದು ತೆರನಾದ ಕಲೆ, ತೆರ ...ದ ವಿಚಾರ" ಎಂಬ ಗ್ರಂಥವನ್ನು ಪ್ರಕಟಿ ...ರು. ಅದು ಶಹಾನ ಕ್ರೂರ ಆಡಳಿತ, ಬಂಡ ...ಳಶಾಹಿ ಮತ್ತು ಅದರ ಸಂಸ್ಕೃತಿ ಮತ್ತು ...ಾನ ಸಾಕು ನಾಯಿಗಳಂತಿರುವ ಬುದ್ಧಿ ಜೀವಿ ... ವೈಖರಿಯನ್ನು ಸಾರುವುದು. 1972ರಲ್ಲಿ

[ಮುಂದಿನ ಪುಟ ನೋಡಿ]

ಸೈತಾನನ ನಾಡಿನಲ್ಲಿ.......

ಇರಾನ್; ಶಹಾನ ನರಕದಿಂದ ಖೊಮೇನಿಯ ನರಕಕ್ಕೆ ಬಂದು ನಿಂತಿದೆ. ಸೈತಾನ್ ಖೊಮೇನಿ ಧರ್ಮಗುರುವಿನ ರೂಪದಲ್ಲಿ ಮತಾಂಧರ ಸಹಾಯದಿಂದ ಅನ್ಯಾಯಕ್ಕೆ ಪ್ರತಿಭಟಿಸುವವರನ್ನು ಚಿತ್ರ ಹಿಂಸೆಗೆ ಗುರಿಪಡಿಸುವ ವ್ಯವಸ್ಥೆಯನ್ನುಂಟುಮಾಡಿದ್ದಾನೆ. ಜನತೆ ಸಹನೆಯ ಎಲ್ಲ ಎಲ್ಲೆಗಳನ್ನು ಮೀರಿ ನಿಲ್ಲುವ ದಿನಗಳು ಸಮೀಪಿಸುತ್ತಿವೆ. ಮುಲ್ಲಾಗಳ ರಾಜ್ಯಭಾರದ ವೈಖರಿಯ ಇಣುಕು ನೋಟವಿದು.

* ಶಹಾನ ಸವಾಕ್ ಅನ್ನು ನಾಚಿಸುವಂಥ ಸವಾಮಾ ಎಂಬ ಗುಪ್ತ ದಳ ಕಾರ್ಯೋನ್ಮುಖವಾಗಿ ಜನತೆಯನ್ನು ಮಧ್ಯ ಯುಗದ ಮೃಗೀಯ ಬದುಕಿಗೆ ತಳ್ಳಲಾಗುತ್ತಿದೆ.

* ಯುದ್ಧಗಳಿಂದಾಗಿ 30 ಲಕ್ಷ ಜನ ನಿರಾಶ್ರಿತರು ಮತ್ತು 50 ಲಕ್ಷ ಜನ ನಿರುದ್ಯೋಗಿಗಳು ಪ್ರೇತಗಳಂತೆ ಅಲೆಯುತ್ತಿದ್ದಾರೆ.

* 30 ಸಾವಿರ ಜನರಿಗೆ ಹೊಸದಾಗಿ ಬೇಡಿಗಳನ್ನು ತೊಡಿಸಲಾಗಿದೆ.

* ಕಳೆದೆರಡು ವರ್ಷಗಳಿಂದ ವಿಶ್ವವಿದ್ಯಾನಿಲಯಗಳು ಮುಚ್ಚಿಕೊಂಡೇ ಇವೆ.

* ಚಿಕ್ಕ ಮಕ್ಕಳು, ರೋಗಿ ಮತ್ತು, ಗರ್ಭಿಣಿಯರನ್ನೂ—ಕ್ರಾಂತಿಕಾರರೆಂಬ ಭ್ರಮೆಯುಂಟಾದರೆ.... ಗುಂಡಿಕ್ಕಲಾಗುತ್ತಿದೆ.

* ಈಚಿನ ದಿನಗಳಲ್ಲಿ 8 ಸಾವಿರ ಯುವಕರನ್ನು ಹಾಗೂ ಸಾವಿರ ರೈತರನ್ನು ಗಲ್ಲಿಗೇರಿಸಲಾಗಿದೆ. ಅವರಲ್ಲಿ ಹೆಚ್ಚು ಜನ ಮೊಜಾಹೆದಿನ್ ಪಕ್ಷಕ್ಕೆ ಸೇರಿದವರಾಗಿದ್ದಾರೆ.

ಜನತೆಯನ್ನು ಜೀವಂತ ಹುಗಿದ ನಿದರ್ಶನಗಳಿವೆ.

* ಮಹಿಳೆಯರ ಸ್ಥಾನಮಾನಗಳು ಕೆಳಮುಖವಾಗಿವೆ.

* ಕ್ರಾಂತಿಕಾರಿಗಳನ್ನು ಕೊಂದಾಗ. ಕೊಲ್ಲಲು ಉಪಯೋಗಿಸಿದ ಪ್ರತಿ ಗುಂಡಿಗೆ 1500 ರೂಗಳಷ್ಟು ದಂಡವನ್ನು ಕೊಲೆಯಾದವರ ಮನೆಯಿಂದ ವಸೂಲಿ ಮಾಡಲಾಗುತ್ತಿದೆ.

* 3 ತಿಂಗಳ ಹಿಂದೆ ಕರಪತ್ರ ಹಂಚುತ್ತಿದ್ದ 300 ಹುಡುಗಿಯರನ್ನು ಬೆಂಕಿ ಹಚ್ಚಿ ಕೊಲ್ಲಲಾಯಿತು. ಅಲ್ಲದೆ ಒಬ್ಬಳ ಮೊಲೆಗಳನ್ನು ಕೊಲ್ಲುವ ಮುನ್ನ ಕೆಂಡದಂತೆ ಕಾದ ಕಬ್ಬಿಣದ ಸಲಾಕೆಯಿಂದ ಸುಡಲಾಯಿತು.

* ಹೆಣಗಳನ್ನೆಲ್ಲ ಮರುಭೂಮಿಯಲ್ಲಿ ಬಿಸಾಕಲಾಗುತ್ತಿದೆ. ತೋಳಗಳು ಹೆಣಗಳನ್ನು ಎಳೆದಾಡುತ್ತ ತಿನ್ನುವುದು ಅಲ್ಲಿಯ ಸಾಮಾನ್ಯ ದೃಶ್ಯ.

* ಎಲ್ಲ ಕಡೆ ಚಿತ್ರಹಿಂಸೆಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

* ಹೊರ ದೇಶಗಳಲ್ಲಿ ಓದುತ್ತಿರುವ ಇರಾನಿ ವಿದ್ಯಾರ್ಥಿಗಳು ಇಸ್ಲಾಂ ಗಣರಾಜ್ಯದ ವೈಖರಿಯಿಂದ ರೋಷಿಕೊಂಡದ್ದು ಇಲ್ಲವೆ ಹೇಸಿಕೊಂಡದ್ದು ಇಸ್ಲಾಂ ಸಂಘದಿಂದ ಗೊತ್ತಾದರೆ ಅವರನ್ನು ಕರೆಸಿ ವಿಚಾರಣೆಯಿಲ್ಲದೆ ಗುಂಡಿಕ್ಕಲಾಗುವುದು.

* ಫಿಲಿಪಾಯಿನ್ಸ್‌ನಲ್ಲಿ ಓದುತ್ತಿದ್ದ 8 ವಿದ್ಯಾರ್ಥಿಗಳನ್ನು ಕರೆಸಿ ವಿಮಾನ ನಿಲ್ದಾಣದಲ್ಲೇ ಗುಂಡಿಕ್ಕಿದ್ದು ಅಚ್ಚ ಹೊಸ ಸುದ್ದಿ.

* ವಿವಿಧ ರೀತಿಯ ಚಿತ್ರ ಹಿಂಸೆಯ ಯಾತನಾ ಶಿಬಿರಗಳಾದ ಇರಾನದ ಜೈಲುಗಳನ್ನು ವೀಕ್ಷಿಸಲು ಸಂಯುಕ್ತರಾಷ್ಟ್ರ ಸಂಘ ತನ್ನ ಪ್ರತಿನಿಧಿಗಳನ್ನು ಕಳಿಸುವ ಇಚ್ಛೆ ವ್ಯಕ್ತಪಡಿಸಿದಾಗ ಅವಕಾಶ ಸಿಗಲಿಲ್ಲ.

* ತಾಳಲಾರದ ಹಸಿವಿನಿಂದಾಗಿ ಚಿಕ್ಕ ಪುಟ್ಟ ಕಳ್ಳತನ ಮಾಡಿದವರು ಕೈಗಳನ್ನು ಕಳೆದುಕೊಂಡು ತಿರುಗುತ್ತಿದ್ದಾರೆ.

* ವ್ಯಾಪಾರಿಗಳು, ಸುಲಿಗೆಕೋರರು, ಮತಾಂಧರು ಸುಖವಾಗಿದ್ದಾರೆ.

* ಇವೆಲ್ಲವುಗಳ ಮಧ್ಯ ಎಂಥ ಕ್ರೂರ ಶಿಕ್ಷೆಗೂ ಭಯಪಡದೆ ಸೂಳೆಗಾರಿಕೆ ನಿರಂತರವಾಗಿ ಬೆಳೆಯುತ್ತಿದೆ.

ಮತಾಂಧತೆಯನ್ನು ಪ್ರಶ್ನಿಸಿದ ಬಾಲೆಯ ಕಾಲನ್ನು ಸುಟ್ಟಾಗ.... ಚಿತ್ರಹಿಂಸೆಯ ಒಂದು 'ಸಾಮ್ಯ' ರೂಪವಿದು



ಹೊರ ರಾಜ್ಯಗಳಲ್ಲಿ

ಬಿಹಾರ : ಎಚ್ಚೆತ್ತ ಕಲ್ಲಿದ್ದಲು ಗ

ಬಿಹಾರದ ಧನಬಾದ್ ಕಲ್ಲಿದ್ದಲು ಕ್ಷೇತ್ರದ ಇಡೀ ಕಲ್ಲಿದ್ದಲು ಉತ್ಪಾದನೆಯನ್ನು ರಾಷ್ಟ್ರೀಕರಣಗೊಳಿಸಿದ ನಂತರದ ಹತ್ತು ವರ್ಷಗಳಲ್ಲಿ ಪ್ರಗತಿಯನ್ನು ಕಾಣದೇ ಹೋದರೂ ಹಲವಾರು ಸಮಾಜ ವಿರೋಧಿ ಗುಂಪುಗಳು ಬಲಗೊಂಡಿರುವುದನ್ನು ಮಾತ್ರ ಸ್ಪಷ್ಟವಾಗಿ ಕಾಣಬಹುದಾಗಿದೆ. ದೇಶದ ಕಲ್ಲಿದ್ದಲು ಕ್ಷೇತ್ರಗಳಲ್ಲಿ ಪ್ರಮುಖವಾದ ಧನಬಾದ್ ಕ್ಷೇತ್ರವೂ ಕೂಡ ಸಂಪೂರ್ಣವಾಗಿ ಸಮಾಜಘಾತುಕ ಶಕ್ತಿಗಳ ಕೈಯಲ್ಲೇ ಇದೆಯೆಂದು ಖಂಡಿತವಾಗಿ ಹೇಳಬಹುದಾಗಿದೆ. ಈ ಕ್ಷೇತ್ರದಲ್ಲಿ ರಾಷ್ಟ್ರೀಯ ಕಲ್ಲಿದ್ದಲು ನೀತಿಯ ವಿಕೃತಿಯೂ ಅದರ ಗೋಸುಂಬೆತನವೂ ಕಾಣುವುದಲ್ಲದೇ ಊಳಿಗಮಾನ್ಯ ಪದ್ಧತಿಯನ್ನು ಬೆಳೆಸುತ್ತಾ ತಮ್ಮ ಬೇಳೆ ಬೇಯಿಸಿಕೊಳ್ಳುವ ಕಾರ್ಮಿಕ ಯೂನಿಯನ್‌ಗಳ ಕೆಲ ನಾಯಕರುಗಳ ಅಸಹ್ಯ ವರ್ತನೆಯೂ ಕಾಣುತ್ತದೆ. ಕಂಪನಿಗಳಂತೂ ಕಾರ್ಮಿಕರನ್ನು ಶೋಷಣೆ ಮಾಡುತವೆ; ಆದರೆ ಕಾರ್ಮಿಕರ ಹಿತ ರಕ್ಷಿಸುವುದಾಗಿ ಬೊಗಳೆ ಹೊಡೆಯುವ ಕಾರ್ಮಿಕ ಸಂಘಗಳೂ ಸಹ ಕಾರ್ಮಿಕರನ್ನು ಶೋಷಿಸುವುದು ನಿಚ್ಚಳವಾಗಿ ಕಾಣುತ್ತದೆ.

ಧನಬಾದ್ ಕಲ್ಲಿದ್ದಲು ಕ್ಷೇತ್ರವು ರಾಷ್ಟ್ರೀಕರಣಗೊಂಡ ನಂತರ ಪೇಟೆಯಲ್ಲಿ ಕಲ್ಲಿದ್ದಲಿನ ಬೆಲೆಯು ಹೆಚ್ಚುತ್ತಲೇ ಸಾಗಿದ್ದು ಕಲ್ಲಿದ್ದಲು ತೆಗೆದು ಸಿದ್ಧಪಡಿಸುವ ಖರ್ಚು ಹೆಚ್ಚಾಗಿರುವುದೇ ಈ ಬೆಲೆ ಏರಿಕೆಗೆ ಕಾರಣವೆಂದು ಹೇಳಲಾಗಿದೆ. 1975-76ರಲ್ಲಿ ಒಂದು ಟನ್ ಕಲ್ಲಿದ್ದಲು ತೆಗೆದು ಸಿದ್ಧಪಡಿಸಲು ರೂ. 68-75 ಪೈಸೆ ಖರ್ಚಾಗುತ್ತಿತ್ತೆಂದೂ 1979-80ರಲ್ಲಿ ಇದು ರೂ- 116-75 ಪೈಸೆಗೆ ಏರಿತೆಂದೂ ಹೇಳಲಾಗುತ್ತಿದೆ. ಕಲ್ಲಿದ್ದಲು ತೆಗೆಯಲೆಂದೇ ಈ ಖರ್ಚು ಹೆಚ್ಚಾಗಿರುವುದಾದರೆ ಕೂಲಿಕಾರರ ಕೂಲಿಯೂ ಕೂಡ ಹೆಚ್ಚಾಗಬೇಕಿತ್ತು. ಆದರೆ ಹೀಗಾಗದೇ ಅಧಿಕಾರಶಾಹಿಯು ಅನುಕೂಲತೆಗಳನ್ನು ತಮಗಾಗಿ ಹೆಚ್ಚು ಮಾಡಿಕೊಂಡುದುದರಿಂದ ಈ ಖರ್ಚು ಹೆಚ್ಚಾಗಿದೆಯೆಂಬುದನ್ನು ಇಲ್ಲಿ ಮರೆಮಾಚಲಾಗಿದೆ. ಈ ಪ್ರದೇಶದ ಸಿಜುವಾ ಕಾಲಿಯರಿ

ಏಕಲವ್ಯ

ಯಲ್ಲಿ ಅಲ್ಲಿಯ ಕಾರ್ಮಿಕರ ಮಕ್ಕಳಿಗಾಗಿ ಪ್ರಾಥಮಿಕ ಶಾಲೆಯೂ ಇಲ್ಲದಿರುವಾಗ 'ಸಿಜುವಾ ಡಿನೋಬ್ಲಿ' ಎಂಬ ಶಾಲೆಯನ್ನು ಸಿರಿವಂತರ ಮಕ್ಕಳಿಗೆ ನಡೆಸಲಾಗುತ್ತಿದೆ. ಈಚೆಗೆ ಕಾಲೇಜು ಕೂಡ ಇಲ್ಲಿ ನಡೆಯುತ್ತಿದ್ದು ಇಲ್ಲಿ ಫೀಸು ಅತಿ ದುಬಾರಿ ಇರುವುದರಿಂದ ಕಾರ್ಮಿಕರು ತಮ ಮಕ್ಕಳನ್ನು ಈ ಶಾಲೆ-ಕಾಲೇಜುಗಳಿಗೆ ಕಳಿಸಲು ಅಸಮರ್ಥರಾಗಿದ್ದಾರೆ. ಇಷ್ಟೇ ಅಲ್ಲದೆ ಸಿರಿವಂತರ ಮಕ್ಕಳು ಈ ಶಾಲೆ-ಕಾಲೇಜುಗಳಿಗೆ ಹೋಗಲು ಅನುಕೂಲವಾಗಲೆಂದು ಕಂಪನಿಯವರು ರಿಯಾಯಿತಿ ದರದಲ್ಲಿ ಬಸ್ ಚಾರ್ಜ್ ಮಾಡಿ ಬಸ್‌ಗಳನ್ನು ನಡೆಸುತ್ತಿದ್ದಾರೆ. ಅಧಿಕಾರಶಾಹಿಯ ನಂತರ ಈ ಕ್ಷೇತ್ರದಲ್ಲಿ ಆರಾಮವಾಗಿ ಇರುವವ

ರೆಂದರೆ ಕಾರ್ಮಿಕ ಮುಖಂಡರೆಂದು ತಮ್ಮ
ತಾವು ಕರೆದುಕೊಳ್ಳುತ್ತಿರುವ ಕೆಲವು ಜನ
ಇವರು ಕಾರ್ಮಿಕರ ಅಭ್ಯುದಯಕ್ಕಾಗಿ ಪ್ರಾ
ಣಿಕವಾಗಿ ದುಡಿಯದೇ ಅಧಿಕಾರ ವರ್ಗದೊ
ಅನೈತಿಕವಾದ-ಅಪ್ರಾಮಾಣಿಕವಾದ ಸಂಬ
ಹೊಂದಿರುವುದರಿಂದಲೇ ಗಣಿಗಳಲ್ಲಿ ಮಾಮ
ನೌಕರರಾಗಿದ್ದರೂ ಕೂಡ ಇವರೂ ಅಧಿಕ
ಶಾಹಿಯ ರೀತಿಯಲ್ಲೇ ಜೀವನ ನಡೆಸುತ್ತಿದ್ದಾ
ಸರ್ಕಾರ ಮತ್ತು ಆಡಳಿತ ವರ್ಗದ ಜನರೊಂ
ಷಾಮೀಲಾಗಿ ಕಾರ್ಮಿಕರ ಹಿತವನ್ನು ಬಲಿಗೊ
ಈ ಜನ ಈಗ ಲಕ್ಷಾಧೀಶರೂ ಆಗಿದ್ದಾರೆ.
ಬಾದ್ ಜಿಲ್ಲೆಯಲ್ಲಿ ಪ್ರತಿ ವರುಷ 300-4
ಕೋಟಿ ರೂ. ಮೌಲ್ಯದ ಕಲ್ಲಿದ್ದಲು ಉತ್ಪಾ
ಯಾಗುತ್ತಿದ್ದು ಇದರ ಬಹುಭಾಗ ಸ್ಥಾನೀ
ಅಧಿಕಾರಶಾಹಿಗೇ ಹೋಗುತ್ತದೆಂದೇ ಹೇಳಬ
ದಾಗಿದೆ.

ಸಿಜುವಾ ಕ್ಷೇತ್ರದ ಗಣಿ ಕಾರ್ಮಿಕರಲ್ಲಿ ಶೇಕ
80ಕ್ಕಿಂತ ಹೆಚ್ಚು ಜನರು ಹರಿಜನರೂ, ಭುಯ
ಮಾಂಝಿ ಮೊದಲಾದ ಹಿಂದುಳಿದ ಜ
ಗಳವರೂ ಆಗಿದ್ದಾರೆ. ಸ್ತ್ರೀಯರ ಸಂಖ್ಯೆ
ಕಾರ್ಮಿಕರಲ್ಲಿ ಪುರುಷರಷ್ಟೇ ಇದೆ. ತುತ
ಪರಿಸ್ಥಿತಿಯನ್ನು ಹೇರಿದಾಗ ಲೋಡಿಂಗ್
ಸಕ್ಕೆ 'ಪೇ ಲೋಡರ್' ಎಂಬ ಯಂತ್ರವ
ತಂದದ್ದರಿಂದ ಸಾವಿರಾರು ಜನರು ಕೆಲಸ ಕಳೆ
ಕೊಂಡರು. ಇವರಲ್ಲಿ ಬಹು ಸಂಖ್ಯೆಯ
ಸ್ತ್ರೀಯರೇ ಇದ್ದರು. 'ಟೀಪಲಾ' ಎ

ಸಾಹಿತ್ಯ ಲೋಕದ ಬಿರುಗಾಳಿ ಸಯೀದ್ ಸುಲ್ತಾನಪೂರ್

[ಮಧ್ಯದ ಪುಟದಿಂದ]

ಈ ಗ್ರಂಥದ ಪುನರ್ಮುದ್ರಣದ ಆರೋಪಕ್ಕಾಗಿ ಮತ್ತೆ ಜೈಲು ಸೇರ ಬೇಕಾಯಿತು. ಈ ವೇಳೆಗಾಗಲೆ ಸಯೀದ್ ಸುಲ್ತಾನಪೂರ್ ಕಮ್ಯುನಿಸ್ಟ್ ಚಳುವಳಿಯ ಅವಿಭಾಜ್ಯ ಅಂಗವಾಗಿ ಹೋಗಿದ್ದರು. "ಜೈಲು ಕವನಗಳು" ಎಂಬ ಸಂಕಲನ ಪ್ರಕಟಿಸಿದ್ದಕ್ಕಾಗಿ 1974ರಲ್ಲಿ ಮತ್ತೆ ಜೈಲು ಸೇರಬೇಕಾಯಿತು. ಆ ಕವನಗಳಲ್ಲಿ ಜೈಲಿನ ಯಾತನಾಮಯವಾದ ಬದುಕಿನ ಚಿತ್ರಣವಿದೆ. ಸವಾಕ್ ಅವರನ್ನು 21 ದಿನಗಳವರೆಗೆ ಅರೆಪ್ರಜ್ಞೆಸ್ಥಿತಿಯಲ್ಲಿಟ್ಟಿತು. ವಿವಿಧ ರೀತಿಯ ದೈಹಿಕ ಮಾನಸಿಕ ಹಿಂಸೆ ಕೊಟ್ಟಿತು. ಆದರೂ ಜಗ್ಗಲಿಲ್ಲ. ಕೊನೆಗೆ ೩ ವರ್ಷಗಳವರೆಗೆ ಜೈಲುಶಿಕ್ಷೆಗೆ ಗುರಿಯಾಗಬೇಕಾಯಿತು. "ಕಸಾಯಿಖಾನೆಯಿಂದ" ಎಂಬ ಕವನ ಸಂಕಲನ ಇದೇವೇಳೆಯಲ್ಲಿ ಬರೆದದ್ದು.

ಜೈಲಿನಿಂದ ಹೊರಬಂದ ಮೇಲೆ ಯುರೋಪು ಖಂಡದಲ್ಲೆಲ್ಲ ಸುತ್ತಿ ಶಹಾನ ರಾಜ್ಯಭಾರದ ಕೊಳಕುತನಗಳನ್ನು ಬಯಲಿಗೆಳೆದರು. ಮುಂದೆ ಇರಾನಕ್ಕೆ ಮರಳಿದ ನಂತರ 1979ರಲ್ಲಿ ಶಹಾನ ಸರ್ವಾಧಿಕಾರಕ್ಕೆ ವಿರುದ್ಧವಾದಂಥ "ಇರಾನ್ ಕೂಲಿ ಅಬ್ಬಾಸ್ ಅಘಾ", "ಸಾಮ್ರಾಜ್ಯಶಾಹಿ ನಾಶವಾಗಲಿ" ಎಂಬ ನಾಟಕಗಳನ್ನು ಪ್ರದರ್ಶಿಸಿದರು. ಈ ನಾಟಕಗಳು ಕಲೆ ಮತ್ತು ಹೋರಾಟದ ಏಕತೆಯ ಸಂಕೇತಗಳಾಗಿದ್ದವು.

ಶಹಾನ ಸಾಮ್ರಾಜ್ಯ ಉರುಳಿ ಮತಾಂಧ ಖೊಮೇನಿಯ ಸಾಮ್ರಾಜ್ಯ ಉದಯವಾಯಿತು. ಇರಾನ್ ಬರಹಗಾರ ಸಂಘದ ನಾಯಕ, ಇಡೀ ದೇಶದಲ್ಲೇ ಜನಪ್ರಿಯ ಕವಿಯಾಗಿದ್ದ ಸಯೀದ್ ಸುಲ್ತಾನಪೂರ್ ಅವರನ್ನು ಇಸ್ಲಾಮಿಕ್ ಗಣರಾಜ್ಯ ಅವರ ವಿವಾಹ ಸಮಾರಂಭದಲ್ಲಿ-ಏಪ್ರಿಲ್

16, 1981ರಂದು-ಯಾವುದೇ ಕಾರಣ ಕೊಡ
ಹಿಡಿದು ಜೈಲಿಗೆ ಹಾಕಿ-ಮುಂದೆ ಜೂನ್ 2
1981ರಂದು ವಿಚಾರಣೆಗೆ ಕೂಡ ಅವಕಾ
ಕೊಡದೆ ಗಲ್ಲಿಗೇರಿಸಿತು. ಧರ್ಮಲಂಡ
ಸಂಸ್ಕೃತಿ ಮತ್ತು ಮಾನವೀಯತೆಯ ಕೊ
ಮಾಡುವುದರಲ್ಲಿ ನಿಸ್ಸೀಮರು ಎಂಬುದನ
ಖೊಮೇನಿ ಸರ್ಕಾರ ತೋರಿಸಿಕೊಟ್ಟಿತು. ಆದ
ಹೋರಾಟಮಯವಾದ ಸಾಂಸ್ಕೃತಿಕ ಬದುಕ
ಸಾವಿಲ್ಲ. ಎಂಥ ಕಷ್ಟದಲ್ಲೂ ಅದು ತನ್ನ ಅಸ್ತಿ
ವನ್ನು ಕಾಯ್ದುಕೊಳ್ಳುವುದು. ಅಂತೆ
ಹುತಾತ್ಮ ಸಯೀದ್ ಸುಲ್ತಾನಪೂರ್ ತಮ
ಸಾಹಿತ್ಯದಲ್ಲಿ ಜೀವಂತವಾಗಿದ್ದು ಕೋಟಿ ಕೋ
ಜನರ ಹೃದಯದಲ್ಲಿ ಕ್ರಾಂತಿಯ ಬಿರುಗಾಳಿಯನ
ಹಬ್ಬಿಸುತ್ತಲೇ ಇದ್ದಾರೆ. ಸಾಂಸ್ಕೃತಿಕ ಜವ
ಬ್ದಾರಿಯ ಕಲಾಕಾರರಿಗೆ ಸಯೀದ್ ಸುಲ್ತಾ
ಪೂರರ ಬದುಕು ಒಂದು ಅರ್ಥಪೂರ್ಣ ಕೊಡು

ಕಾರ್ಮಿಕರ ಮಾದರಿ ಹೋರಾಟ

ಯಂತ್ರಗಳನ್ನು ಮುನಿಡೀಹ ಮತ್ತು ಸುದಾಮು ಡೀಹ ಮುಂತಾದ ಸ್ಥಳಗಳಲ್ಲಿ ಸ್ಥಾಪಿಸಿದುದರಿಂದ ಮೊದಲು 2000 ಕಾರ್ಮಿಕರು ಕೆಲಸ ಮಾಡುತ್ತಿರುವ ಕಡೆಗಳಲ್ಲಿ ಅರ್ಧಕ್ಕಿಂತ ಹೆಚ್ಚು ಜನರನ್ನು ಈ ಯಂತ್ರ ಬಂದ ನಂತರ ಕಿತ್ತು ಹಾಕಲಾಗುತ್ತಿದೆ. ಈ ಕ್ಷೇತ್ರವು ರಾಷ್ಟ್ರೀಕರಣಕ್ಕೊಳಪಡುವ ಮುನ್ನ ಖಾಸಗೀ ಮಾಲೀಕರ ಬಳಿ ಕೆಲಸ ಮಾಡುತ್ತಿದ್ದ ಎಲ್ಲಾ ನೌಕರರಿಗೆ ಕೆಲಸವನ್ನು ಭ್ರಷ್ಟ ಅಧಿಕಾರಶಾಹಿಯು ನಿರಾಕರಿಸಿತಾದ್ದರಿಂದ ಕಾರ್ಮಿಕರು ಬೀದಿಪಾಲಾದರು.

ರಾಷ್ಟ್ರೀಕರಣ ಮಾಡುವಾಗ ಈ ಕ್ಷೇತ್ರದಲ್ಲಿದ್ದ ಗುತ್ತಿಗೆದಾರರ ಶೋಷಣೆಯನ್ನು ತಪ್ಪಿಸುವುದೂ ತನ್ನ ಉದ್ದೇಶವೆಂದು ಸರ್ಕಾರ ಹೇಳಿಕೊಂಡು ಮಾಡಿತಾದರೂ ಇಂದಿಗೂ ಸರ್ಕಾರವೇ 50ಸಾವಿರ ಕಾರ್ಮಿಕರು ಮಾಡುವಂಥ ಕೆಲಸಗಳನ್ನು ಖಾಸಗಿ ಗುತ್ತೇದಾರರಿಗೆ ವಹಿಸಿಕೊಡುತ್ತಿದೆ. ಅಂದರೆ ಖಾಸಗಿ ಗುತ್ತಿಗೆದಾರರ ಶೋಷಣೆಯಿಂದ ಕಾರ್ಮಿಕರನ್ನು ತಪ್ಪಿಸುವುದಾಗಿ ಹೇಳಿಕೊಂಡ ಸರ್ಕಾರದ ಘೋಷಣೆ ಎಂಥ ಮೋಸತನದ್ದು ಎಂಬುದು ಗೊತ್ತಾಗುತ್ತದೆ. ಖಾಸಗಿ ಗುತ್ತೇದಾರರು ಕಾರ್ಮಿಕರಿಗೆ ವಿವಿಧ ಕೆಲಸಗಳನ್ನು ವಹಿಸಿ ಕೊಟ್ಟು ಭೀಕರ ಶೋಷಣೆ ನಡೆಸುತಿದ್ದಾರೆ. ಈ ಗುತ್ತಿಗೆದಾರರ ನೋಟುಗಳಿಗೆ ತಮ್ಮನ್ನು ಮಾರಿಕೊಂಡಿರುವ ಕಂಪನಿಯ ಅಧಿಕಾರ ವರ್ಗ ಶೋಷಣೆಗೆ ನೀರನ್ನು ಎರೆಯುತ್ತದೆ. ಆಳವಾದ ಗಣಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಹೆಸರು-ಲೆಕ್ಕ-ರಿಜಿಸ್ಟರ್‌ಗಳಲ್ಲಿ ಖಾಸಗಿ ಗುತ್ತಿಗೆದಾರರು ಎಲ್ಲಿಯೂ ನಮೂದಿಸುವುದಿಲ್ಲ. ಹೀಗಾಗಿಯೇ ಛಸನಾಲಾದಂತ ಗಣಿ ದುರಂತಗಳಲ್ಲಿ ಸತ್ತವರ ಸಂಖ್ಯೆಯೂ ಸಹ ಸರಿಯಾಗಿ ದೊರಕುವುದಿಲ್ಲ.

ಭ್ರಷ್ಟ ಕಾರ್ಮಿಕ ನಾಯಕರಿರುವಲ್ಲಿ ಕಾರ್ಮಿಕರಿಗೆ ಯಾವುದೇ ಸಂಘಟನೆಯ ಬಗ್ಗೆ ನಿರಾಶೆ ಮೂಡುತ್ತದೆ. ಭರವಸೆ ಕುಂಠಿತವಾಗುತ್ತದೆ. ವಿವಿಧ ಹೆಸರಿನ ವಿವಿಧ ಸಂಘಗಳಿಂದ ಶೋಷಣೆಗೀಡಾದ ಧನಬಾದ್ ಕಾರ್ಮಿಕರಿಗೆ ಕಾರ್ಮಿಕ ಯೂನಿಯನ್‌ಗಳ ಬಗ್ಗೇ ಜಿಗುಪ್ಸೆ ಮೂಡಿತ್ತು. ಯಾಕೆಂದರೆ ತಾನು ಪ್ರಾಮಾಣಿಕನೆಂದು ಹೇಳಿಕೊಂಡು ಒಂದು ಯೂನಿಯನ್ ಮಾಡಿದ್ದ ಪ್ರತಿಯೊಬ್ಬ ಕಾರ್ಮಿಕ ನಾಯಕನೂ ಮಹಾ ಕಳ್ಳನಾಗುತ್ತಿದ್ದುದನ್ನು ಅವರು ಕಣ್ಣಾರೆ ಕಂಡಿದ್ದರು; ಅವರ ಗೂಂಡಾ ಗುಂಪನ್ನು ಕಂಡು ಪ್ರತಿಭಟಿಸಲು ಹೋಗಿರಲಿಲ್ಲ.

ಹೀಗೆ ನಿರಾಶೆಗೊಂಡ ಕಾರ್ಮಿಕರಲ್ಲಿ ಮತ್ತೆ ಆಶಾಕಿರಣವನ್ನು ಚಿಗುರಿಸಿದ್ದು 'ಜನತಾ ಶ್ರಮಿಕ ಸಮಿತಿ. ಅಧಿಕಾರ, ಶಾಹಿಯಿಂದ, ಸರ್ಕಾರದಿಂದ ನಾನಾ ಬಗೆಯ ಅನುಕೂಲತೆಗಳನ್ನು ಪಡೆಯುವ ಕಾರ್ಮಿಕ ನಾಯಕರುಗಳ ಬಗ್ಗೆ ತೀವ್ರ ಅಸಮ್ಮತಿಯನ್ನು ಹೊಂದಿದ್ದ ಕಾರ್ಮಿಕರು ತಮ್ಮ ಮಧ್ಯದ ಅತ್ಯಂತ ಪ್ರಾಮಾಣಿಕರನ್ನು 'ಜನತಾ ಶ್ರಮಿಕ ಸಮಿತಿಯ ನಾಯಕರನ್ನಾಗಿ ಮಾಡಿದರು. ಹೀಗೆ ಶ್ರೀ ವಿಜಯ ಭರೆ ಅವರು ಸಮಿತಿಯ ಅಧ್ಯಕ್ಷರಾದರು. ಸಾಮಾನ್ಯವಾಗಿ ಎಲ್ಲಾ ಕಾರ್ಮಿಕ ಸಂಘಗಳು ಮಾಡುವಂತೆ ಕೇವಲ ವೇತನ, ಬೋನಸ್‌ಗಾಗಿ ಮಾತ್ರ ಈ ಸಮಿತಿಯು ಹೋರಾಟ ಮಾಡಲು ಉದ್ದೇಶ ಹೊಂದಿರದೇ ಸಮಾಜದ ಸಮಸ್ಯೆಗಳಾದ ಜಾತೀಯತೆ-ಅಸ್ಪೃಶ್ಯತೆ-ಕುಡಿತ-ಮಾರಾಮಾರಿ ಮುಂತಾದ ಸಮಸ್ಯೆಗಳ ವಿರುದ್ಧವೂ ಕೂಡ ಕಾರ್ಮಿಕರಲ್ಲಿ ತಿಳುವಳಿಕೆಯನ್ನು ಮೂಡಿಸಲು ತೊಡಗಿತು. ಇಂಥಕಾರ್ಯಕ್ರಮಗಳಿಂದಲೇ ಸ್ತ್ರೀ-ಪುರುಷರೆಲ್ಲರೂ ಕೂಡಿ ಹೊಸದಾಗಿ ಹಲವಾರು ವಿಷಯಗಳ ಬಗ್ಗೆ ತಿಳುವಳಿಕೆಯನ್ನು ಪಡೆಯತೊಡಗಿದರು.

ಕಾರ್ಮಿಕರ ವಾಸಸ್ಥಾನದ ಬಳಿಯ ಪೂಜಾ ಮಂದಿರವೊಂದು ಯಾವಾವುದೋ ಹಬ್ಬದ ನೆಪದಲ್ಲಿ ಕಾರ್ಮಿಕರನ್ನು ಶೋಷಿಸಲು ಪ್ರಾರಂಭ ಮಾಡಿದಾಗ 'ಜನತಾ ಶ್ರಮಿಕ ಸಮಿತಿ' ಜನರಲ್ಲಿ ಪ್ರಜ್ಞೆ ಮೂಡಿಸಿ ದುಂದುವೆಚ್ಚವನ್ನು ನಿಲ್ಲಿಸಿತು.

ಸಿಜುವಾ ಕ್ಷೇತ್ರದ ಮೋದಿಡೀಹ ಕಾಲಿಯರಿಗೆ ಹೆಚ್ಚು ಉತ್ಪಾದನೆ ಮಾಡಿದ್ದಕ್ಕಾಗಿ 30 ಸಾವಿರ ರೂ. ಗಳು ಪುರಸ್ಕಾರ ರೂಪದಲ್ಲಿ ದೊರೆತಾಗ ಆಡಳಿತ ವರ್ಗವು 1800 ಕಾರ್ಮಿಕರ ಪೈಕಿ ಕೇವಲ 400 ಜನರನ್ನು ಆಯ್ಕೆ ಮಾಡಿ ಅವರಲ್ಲಿ ಹಂಚಲು ಯತ್ನಿಸಿದಾಗ 'ಜನತಾ ಶ್ರಮಿಕ ಸಮಿತಿ'ಯು ಇದು ಕಾರ್ಮಿಕರನ್ನು ಒಡೆಯುವ ತಂತ್ರ ಎಂದು ಎಲ್ಲಾ ಕಾರ್ಮಿಕರಿಗೆ ತಿಳಿಯಪಡಿಸಿ ಈ ಹಣವು ಎಲ್ಲ ಕಾರ್ಮಿಕರಲ್ಲೂ ಹಂಚಲ್ಪಡಬೇಕೆಂದು ಒತ್ತಾಯಪಡಿಸಿತು. ಈಬಗ್ಗೆ ಕಾರ್ಮಿಕರು 29ನೇಏಪ್ರಿಲ್ 81ರಂದು ಬೃಹತ್ ಮೆರವಣಿಗೆ ನಡೆಸಿದರು.

ಇದಕ್ಕೆ ಪ್ರತಿಕ್ರಿಯೆ ಎಂಬಂತೆ ಇಂಟಕ್ (ಐ) ಶಾಖೆಯು ಗಣ ಬಂದ್‌ಗೆ ಕರೆ ನೀಡಿತು. ಜನತಾ ಶ್ರಮಿಕ ಸಮಿತಿ'ಯು ಈ ಬಂದ್ ಕರೆಗೆ ಬೆಂಬಲ ನೀಡದ್ದರಿಂದ ವಿಫಲವಾಯಿತು. ಕೋಪಗೊಂಡ ಇಂಟಕ (ಐ) ಜನರು 4-5-81 ರಂದು ಸಂಜೆ 5 ಗಂಟೆಗೆ ಕಾರ್ಮಿಕರ ಮೇಲೆ ಹಲ್ಲೆ ನಡೆಸಿದರು. ಹಲ್ಲೆಕೋರರಲ್ಲಿ 'ಇಂಟಕ್' ಶಾಖೆಯ ಕಾರ್ಯದರ್ಶಿ ರಾಮಗೋಪಾಲ ಸಿಂಹ ಹಾಗೂ ಇತರ ಮೂವರಿದ್ದರು. ಈ ಹಿಂಸಾಚಾರದ ವಿರೋಧವಾಗಿ 'ಜನತಾ ಶ್ರಮಿಕ ಸಮಿತಿ'ಯವರು 'ದಬ್ಬಾಳಿಕೆ ವಿರೋಧಿ ಪಕ್ಷ'ವೆಂದು ಜೂನ್ 5 ರಿಂದ 20ರ ವರೆಗೆ ವಿವಿಧ ಕಾರ್ಯಕ್ರಮಗಳನ್ನು ಹಾಕಿಕೊಂಡರು. ರಸ್ತೆ ಬದಿಗಳಲ್ಲಿ ಬಹಿರಂಗ ಸಭೆಗಳನ್ನು ನಡೆಸುವುದು, ಬೆಳಗಿನ ಜಾವದಲ್ಲಿ ಪ್ರಭಾತ್ ಫೇರಿಗಳನ್ನು ಮಾಡುವುದು, ಧರಣಿ ಮುಷ್ಕರ ನಡೆಸುವುದು, ಗೋಡೆಗಳ ಮೇಲೆ ಬೇಡಿಕೆಗಳನ್ನು ಬರೆಯುವುದು ಕರಪತ್ರಗಳನ್ನು ಹಂಚುವುದು ಮೊದಲಾದವುಗಳನ್ನು ಕಾರ್ಯಕ್ರಮ ರೂಪವಾಗಿ ಹಮ್ಮಿಕೊಳ್ಳಲಾಗಿತ್ತು. ಸಮಾಜವಾದಿ ಚಿಂತಕ ಶ್ರೀ ಕಿಶನ್ ಪಟನಾಯಕ, ಕೋಲಿಯರಿ ಸಂಘದ ಅಧ್ಯಕ್ಷ ಶಿವಾನಂದ, ಪ್ರಧಾನ ಕಾರ್ಯದರ್ಶಿ ಕೃಷ್ಣವಲ್ಲಭ ಸಹಾಯ, ಜನತಾ ಶ್ರಮಿಕ ಸಮಿತಿಯ ಅಧ್ಯಕ್ಷ ಶ್ರೀವಿಜಯ ಭರ್, ಮತಲೂ ಭುಂಯಾ, ಬಲರಾಮ ರಾಮ ಗುಲಾಮ ಭುಂಯಾ ಮೊದಲಾದ ಕಾರ್ಮಿಕ ನಾಯಕರು ವ್ಯಾಪಕ ಸಾಮಾಜಿಕ-ಆರ್ಥಿಕ ಕಾರ್ಯಕ್ರಮ ನಡೆಸುವುದರ ಅಗತ್ಯವನ್ನು ಒತ್ತಿಹೇಳಿದರು.

ಬಹುಸಂಖ್ಯಾತ ಕಾರ್ಮಿಕರು ಬಡತನದಲ್ಲಿ ಬೇಯುತ್ತಿರುವಾಗ, ಶೋಷಕರ ಬಳಿ ಧನ-ಹೆಂಡ-ಲಾಠಿ-ಪೋಲೀಸು-ಅಧಿಕಾರಗಳಿದ್ದು ಕಾರ್ಮಿಕರ ಬಳಿ ಇವಾವುವೂ ಇಲ್ಲದಿರುವಾಗ ಕಾರ್ಮಿಕರ ಒಟ್ಟಾರೆ ಹಿತ ರಕ್ಷಿಸುವ 'ಜನತಾ ಶ್ರಮಿಕ ಸಮಿತಿ, ಯಂಥ ಸಂಘಟನೆ ಕಟ್ಟಿ ಬೆಳೆಸುವುದು ಸಾಮಾನ್ಯವಲ್ಲ. ಕಾರ್ಮಿಕರನ್ನು ಅಜ್ಞಾನದಿಂದ, ಹೆಂಡದಿಂದ, ಬಡತನದಿಂದ, ಮೂಢ ನಂಬಿಕೆಗಳಿಂದ ದೂರ ಒಯ್ದು ಅವರಿಗೆ ಸರಿಯಾದ ತಿಳುವಳಿಕೆ ನೀಡುವುದು ಹೊಸ ಸಮಾಜ ಕಟ್ಟಲು ದುಡಿಯುವಂತೆ ಸನ್ನದ್ಧಗೊಳಿಸುವುದು 'ಜನತಾ ಶ್ರಮಿಕ ಸಮಿತಿಯು' ನಂಬಿರುವ ಜವಾಬ್ದಾರಿಯಾಗಿದೆ. ಹಾಗಾಗಿಯೇ ಇದರಲ್ಲಿ ಇಂದು 10 ಸಾವಿರಕ್ಕೂ ಹೆಚ್ಚು ಜನ ಕಾರ್ಮಿಕರು ಸದಸ್ಯರಾಗಿ ಕೆಲಸ ಮಾಡುತ್ತಿದ್ದಾರೆ. ಕುಡಿಯುವ ನೀರಿಗಾಗಿ, ತಮ್ಮ ಮಕ್ಕಳ ಶಾಲೆಗಾಗಿ, ಸರಿಯಾದ ರಸ್ತೆಗಳಿಗಾಗಿ, ಈ ಭಾಗದ ಜನರು ಸಂಘರ್ಷವನ್ನು ನಡೆಸಬೇಕಾಗಿದೆ. ಈ ಬೇಡಿಕೆಗಳನ್ನು ಅವರು ಕಳೆದ 10 ವರ್ಷಗಳಿಂದ ಮಂಡಿಸಿಕೊಂಡು ಬಂದಿದ್ದರೂ ಬಗೆಹರಿಸಲಾಗಿಲ್ಲ. ಆದರೆ ಛಲ ಬಿಡದೇ 'ಜನತಾ ಶ್ರಮಿಕ ಸಮಿತಿ'ಯು ಕಾರ್ಮಿಕರ ಬಿಡುಗಡೆಗಾಗಿ, ಹೊಸ ಸಮಾಜ ವ್ಯವಸ್ಥೆಯ ನಿರ್ಮಾಣಕ್ಕಾಗಿ ಮುಂದೆ ಮುಂದೆ ಹೆಜ್ಜೆಯನ್ನು ಇಡುತಿದೆ. ●

ಭ್ರಷ್ಟ ಆಡಳಿತದ ವಿರುದ್ಧ ವಿದ್ಯಾರ್ಥಿಗಳ ಬಂಡು

ಹೆಚ್.ಡಿ.ಕೋಟೆ ಜೂನಿಯರ್ ಕಾಲೇಜಿನ ಹುಡುಗರು ಕಾಲೇಜಿನ ಭ್ರಷ್ಟ ಆಡಳಿತ ವರ್ಗದ ವಿರುದ್ಧ ಹೋರಾಟಕ್ಕಿಳಿದಿದ್ದಾರೆ. ಈ ಕಾಲೇಜು ರಾಜಕೀಯವಾಗಿ ರೋಗಗ್ರಸ್ತವಾಗಿದೆ. ಇಲ್ಲಿನ ಪ್ರಿನ್ಸಿಪಾಲರು ವಿದ್ಯಾರ್ಥಿಗಳ ಏಳಿಗೆಗೆ ಕಂಟಕವಾಗಿದ್ದಾರೆ. ಇಲ್ಲಿನ ವಿದ್ಯಾರ್ಥಿ ಸಂಘವು ವಿದ್ಯಾರ್ಥಿಗಳಿಂದಲೇ ತುಂಬಿದೆ. ಇದನ್ನು ಸಹಿಸದ ಪ್ರಿನ್ಸಿ-ಪಾಲ್ ಕಾಲೇಜಿನ ಬೆಟರ್‌ಮೆಂಟ್ ಕಮಿಟಿಗೆ ರಾಜಕೀಯದವರನ್ನೇ ತುಂಬಿದ್ದಾರೆ. ಸದರಿ ಕಮಿಟಿಯು ವಿದ್ಯಾರ್ಥಿಗಳಿಗೆ ವಿರೋಧವಾದ ಕುತಂತ್ರ ಕೆಲಸಗಳನ್ನು ಮಾಡುತ್ತಿದ್ದು ಕಾಲೇಜಿಗೆ ಕಳಂಕ ತಂದಿದೆ.

ಕಾಲೇಜಿನ ವಿರುದ್ಧ ಹೋರಾಟಕ್ಕಿಳಿದ ವಿದ್ಯಾರ್ಥಿಗಳಲ್ಲಿ ಕೆಲವರಿಗೆ ಕಾಲೇಜಿನ ಆಡಳಿತ ವರ್ಗ ಟಿ.ಸಿ.ಕೊಟ್ಟು ಕಳುಹಿಸುವ ಹೀನಾಯ ಕೆಲಸಕ್ಕಿಳಿದಿದೆ. ಇದಕ್ಕೆಲ್ಲ ಕಾರಣವೆಂದರೆ ಇಲ್ಲಿನ ವಿದ್ಯಾರ್ಥಿಗಳು ಜಾತಿಭಾವನೆಗಳನ್ನು ಮರೆತು ಪರಸ್ಪರ ಸ್ನೇಹ ಸೌಹಾರ್ದದಿಂದ ಬದುಕುತ್ತಿದ್ದರು. ಇಲ್ಲಿನ ದಲಿತ ಲೆಕ್ಚರರೊಬ್ಬರು ವಿದ್ಯಾರ್ಥಿಗಳ ಜೊತೆ ಹೆಚ್ಚು ಬೆರೆತಿರುವುದನ್ನು ಸಹಿಸದ ಪ್ರಿನ್ಸಿಪಾಲರು ಬ್ರಾಹ್ಮಣಹುಡುಗಿಯೊಬ್ಬಳ ಜತೆ ಅವರು ಸಂಬಂಧ ಹೊಂದಿರುವುದಾಗಿ ಪ್ರಚಾರ ಮಾಡಿದ್ದರು. ಈ ಸಂದರ್ಭದಲ್ಲಿ ಎಲ್ಲ ಮೇಲ್ಜಾತಿಯವರೂ ದಲಿತ ಲೆಕ್ಚರರ ವಿರುದ್ಧ ಒಂದಾದರು. ಆದರೆ ವಿದ್ಯಾರ್ಥಿಗಳು ಎಲ್ಲ ಜಾತಿವಾದಿ ನಡವಳಿಕೆಗಳನ್ನು ವಿರೋಧಿಸಿ ಹೋರಾಟಕ್ಕೆ ಇಳಿದಿದ್ದಾರೆ.

—ಬಿ.ಎಂ ಮಹಾದೇವು

ಮಂಡ್ಯದಲ್ಲಿ ಪ್ರತಿಭಟನೆ

ಇತ್ತೀಚಿಗೆ ದೇವೋಲಿ, ಸಾಧುಪುರ, ರಾಯಪುರಗಳಲ್ಲಿ ನಡೆದ ದಲಿತರ ಸಾಮೂಹಿಕ ಕಗ್ಗೊಲೆಯ ವಿರುದ್ಧ ಮಂಡ್ಯ ಜಿಲ್ಲಾ ದ.ಸಂ.ಸ. ದಿನಾಂಕ 31-1-82ರಂದು ಪ್ರತಿಭಟನಾ ಮೆರವಣಿಗೆ ನಡೆಸಿತು. ಕೊನೆಯಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಜಿ.ಟಿ. ವೀರಪ್ಪ, ಕೃಷ್ಣಪ್ಪಗೌಡ ಮತ್ತು ಹೆಬ್ಬಾಲೆ ಲಿಂಗರಾಜು ಮಾತನಾಡಿದರು. ಅಂದು ಸಂಜೆ 7 ಘಂಟೆಗೆ 'ಪತ್ರಿ ಸಂಗಪ್ಪನ ಕಗ್ಗೊಲೆ' ಎಂಬ ನಾಟಕ ನಡೆಯಿತು.

ನಂಜನಗೂಡಲ್ಲಿ ಧರಣಿ

ದಿ. 30-1-82ರ ಶನಿವಾರ ನಂಜನಗೂಡಿ[ನ] ಪೌರ ಕಾರ್ಮಿಕರು ಅಲ್ಲಿನ ಪುರಸಭೆಯ ಮುಂಭಾಗದಲ್ಲಿ ಒಂದು ದಿನದ ಸಾಂಕೇತಿಕ ಧರಣಿ ನಡೆಸಿ ಅಲ್ಲಿನ ಪುರಸಭೆಯ ಹೊರಗೆ ಕೂಲಿ ಕೆಲಸ ಮಾ[ಡಿ] ಜೀವಿಸುತ್ತಿರುವ ಪೌರ ಕಾರ್ಮಿಕರಿಗೆ ಸೈಟ[ು] ಕೊಡಬೇಕೆಂದು ಪುರಸಭಾಧ್ಯಕ್ಷರಿಗೆ ಮನ[ವಿ] ಪತ್ರ ಸಲ್ಲಿಸಿದರು. ಅಲ್ಲಿನ ಪೌರ ಕಾರ್ಮಿಕರ[ು] ಸುಮಾರು ಮುವತ್ತೈದು ವರ್ಷಗಳಿಂದ ನೆ[ಲೆ] ಇಲ್ಲದೆ ಅತ್ಯಂತ ಹೀನಾಯ ಪರಿಸರದಲ್ಲಿ ಬದುಕು[]ತ್ತಿದ್ದು ಆ ಪುರಸಭೆ ಕೇವಲ ಅಲ್ಲಿ ಕೆಲಸ ಮಾಡು[]ವವರಿಗೆ ಮಾತ್ರ ಸೈಟು ಹಂಚಿ ಇತರ ಸುಮಾ[ರು] ನೂರು ಕುಟುಂಬಗಳಿಗೆ ಅನ್ಯಾಯ ಮಾಡಿದೆ. ಇದನ್ನು ನಂಜನಗೂಡು ತಾಲ್ಲೂಕು ದ.ಸಂ.ಸ. ಶಾಖೆ ಪ್ರತಿಭಟಿಸಿ ಪೌರ ಕಾರ್ಮಿಕರ ಪರ ಸೈಟಿಗಾಗಿ ಒತ್ತಾಯಿಸಿತು. ಅಲ್ಲದೆ ಇನ್ನು ಹದಿ[ನೈ]ದು ದಿನಗಳಲ್ಲಿ ಸೈಟು ಹಂಚದಿದ್ದಲ್ಲಿ ಮುಂದೆ ಉಗ್ರ ಹೋರಾಟ ಪ್ರಾರಂಭಿಸುವುದಾಗಿ ಅಲ್ಲಿನ ಪುರಸಭಾಧ್ಯಕ್ಷರಿಗೆ ಎಚ್ಚರಿಕೆ ನೀಡಿದೆ.

ಕತ್ತು ಕೊಯ್ಯುವ ಕೆಲಸಗಳು

[3ನೇ ಪುಟದಿಂದ]

ಸಾವು ಆಯ್ತು. ಸತ್ತವರ ಕುಟುಂಬಕ್ಕೆ ತಲಾ ೨,೦೦೦ ರೂ ಪರಿಹಾರಧನ ಸರ್ಕಾರದಿಂದ ಘೋಷಿಸಲಾಯಿತು. ವಾರಣಾಸಿಯಲ್ಲಿ ಅಸ್ಪೃಶ್ಯ ನೆಂಬ ಹೆಸರಿನಿಂದ ಬೆಳಕಿಗೆ ಬಂದ ಶ್ರೀ ಜಗಜೀವನರಾಂರವರ ಮಗ ರಮೇಶ್ ಇನ್ನೂ ಬೆಲೆ ಜಾಸ್ತಿ ಬೆಲೆ ಕಟ್ಟಿ ತಲಾ ೫೦,೦೦೦ ಕೊಡುವುದಾಗಿ ಹೇಳಿಕೆ ಕೊಟ್ಟಿದ್ದಾರೆ. ವಿರೋಧ ಪಕ್ಷದವರಿಗೆ ಹರಿಜನರ ಸಾವು ರಾಜಕೀಯ ಅಸ್ತ್ರ ಆಯ್ತು. ಹರಿಜನರ ರಕ್ಷಣೆಗೆ ಬಂದೂಕ ಕೊಡಬೇಕೆಂದು ಮೋಸದ ಮಾತಾಡಿ ಆಯ್ತು. ಇದೆಲ್ಲಾ ಮಬ್ಬಿನಲ್ಲಿ ಕತ್ತುಕೊಯ್ಯುವ ಕೆಲಸಗಳು ಆದರೆ ಆಳುವ ಪಕ್ಷ ಲೆಕ್ಕಕ್ಕಿಲ್ಲದ ವಿರೋಧ ಪಕ್ಷಗಳು ಆಳುವ ಪಕ್ಷದಲ್ಲಿ ಜೀತದಾಳುಗಳಾಗಿರುವ ಹರಿಜನ ನಾಯಕರುಗಳು ಕೇವಲ ಮಾತಾಡುವ ಈ ದೇಶದ ಬುದ್ಧಿಜೀವಿಗಳು ನಾವು ಕೊಲೆಗಡುಕರು ಎಚ್ಚರಿಕೆ! ಎಂದು ಬಂದೂಕ ಹಿಡಿದು ವ್ಯಾಪಾರಕ್ಕೆ ಕೂತಿರುವುದು ಬಹಿರಂಗ ಸತ್ಯ.

ನಂಜನಗೂಡಿನಲ್ಲಿ ಮೂಗುದಾರವಿಲ್ಲದ ಪೋಲೀಸ್ ಹಾವಳಿ

ನಂಜನಗೂಡು ತಾಲ್ಲೂಕಿನಲ್ಲಿ ಪೋಲೀಸ್ ಹಲ್ಲೆಗಳು ಈಗಂತು ಹೆಚ್ಚುತ್ತಿವೆ. ಕಾರಾಪುರ ಎಂಬ ಗ್ರಾಮದ ಬಡಲಿಂಗಾಯಿತನೊಬ್ಬ ದೊಡ್ಡ ಕೌಲಂದೆ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಯಲ್ಲಪ್ಪ ಎಂಬುವರಿಂದ ಜೂಜಾಟವಾಡುತ್ತಿದ್ದನೆಂಬ ಕಾರಣಕ್ಕೆ ಸಿಕ್ಕಾಪಟ್ಟೆ ಏಟು ತಿಂದನು. ಅದಾದ ಹನ್ನೊಂದು ದಿನಗಳ ನಂತರ ಅವನು ತನ್ನ ಮನೆಯಲ್ಲಿ ಕಳೆದ ಜನವರಿ 27 ರಂದು ಸತ್ತನು. ಇದೇ ಸಂದರ್ಭದಲ್ಲಿ ಮತ್ತೊಬ್ಬನ ಕೈ ಮುರಿದಿರುವುದು ತಿಳಿದು ಬಂದಿದೆ. ಯಾವುದೇ ದಾಖಲೆಗಳಿಲ್ಲದ ಈ ಕೊಲೆ ಮುಚ್ಚಲ್ಪಟ್ಟಿದೆ.

ಇದೇ ತಾಲ್ಲೂಕಿನ ಗೆಜ್ಜಿಗನಹಳ್ಳಿ ಎಂಬ ಗ್ರಾಮದಲ್ಲಿ ಹರಿಜನ ಹುಡುಗಿ ಕೆಂಪಮ್ಮ ಎಂಬುವಳ ಜತೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದ ಸುಂದರ ಶೆಟ್ಟಿ ಎಂಬ ಯುವಕನು ಆಕೆಯನ್ನು ಮದುವೆಯಾಗಲು ಒಪ್ಪಿದ. ಆದರೆ ಮೇಲ್ಕಂಡ ಸಬ್-ಇನ್ಸ್‌ಪೆಕ್ಟರ್, ತಾಲ್ಲೂಕ್ ಬೋರ್ಡ್ ಮೆಂಬರ್ ಮಂಶೆಟ್ಟಿ ಮುಂತಾದವರ ಕುತಂತ್ರದಿಂದ ಮದುವೆ ನಿಂತಿದೆ. ಹುಡುಗನ ಮನಸ್ಸನ್ನ ಬದಲಾಯಿಸುವ ತೀವ್ರ ಪ್ರಯತ್ನಗಳು ನಡೆಯುತ್ತಿವೆ.

ನಂಜನಗೂಡು ತಾಲ್ಲೂಕು ಮುಳ್ಳೂರಿನ ಎರಡು ದಲಿತ ಕುಟುಂಬಗಳು ಮಕ್ಕಳ ಮಾತಿಗೆ ಪರಸ್ಪರ ಜಗಳಾಡಿಕೊಂಡು ರೂರಲ್ ಪೋಲೀಸ್ ಸ್ಟೇಷನ್ನಿಗೆ ಹೋದಾಗ ಮರಿಗಂಡಯ್ಯ ಎಂಬಾತನ ಮೇಲೆ ಪೋಲೀಸ್ ಹಲ್ಲೆ ನಡೆದಿದೆ. ಸಬ್‌ಇನ್ಸ್‌ಪೆಕ್ಟರ್ ಚಿನ್ನಸ್ವಾಮಿಯವರು ಮೂಳೆ ಮುರಿಯುವುದಾಗಿ ಹೇಳಿದ್ದಾರೆ. ಪೋಲೀಸರು ದಲಿತ ವಿರೋಧಿ ನೀತಿಯನ್ನು ಕ್ರೂರ ಹಲ್ಲೆಗಳನ್ನು ದಲಿತ ಸಂಘರ್ಷ ಸಮಿತಿ ಈ ಮೂಲಕ ಖಂಡಿಸಿದೆ.

ಚಾಮರಾಜ ನಗರ ತಾಲ್ಲೂಕು ಮುಕ್ಕಡಹಳ್ಳಿಯಲ್ಲಿ ಪುಟ್ಟಮಾದಮ್ಮ ಎಂಬ ಸುಮಾರು 45 ವರ್ಷ ವಯಸ್ಸಿನ ಹರಿಜನ ಹೆಂಗಸು ಸಂಶಯಾಸ್ಪದ ರೀತಿಯಲ್ಲಿ ಸತ್ತಿದ್ದಾಳೆ. ಈಕೆ ಚಾಮರಾಜನಗರದ ಕಾಂಗ್ರೆಸ್ ಎಂ.ಎಲ್.ಎ. ಎಂ.ಸಿ. ಬಸಪ್ಪ ಎಂಬುವರಲ್ಲಿ ಕಳೆದ ಆರೇಳು ವರ್ಷಗಳಿಂದ ಜೀತಕ್ಕಿದ್ದಳು ಎಂಬುದು ಬಲ್ಲ ಮೂಲಗಳಿಂದ ತಿಳಿದು ಬಂದಿದೆ. ಮಲೆಯೂರಿನ ಮೇಲ್ಕಂಡ ಎಮ್ಮೆಲ್ಲೆಯ ಬಾವಿಯಲ್ಲಿ ತೇಲಿದ ಈ ಹೆಣವನ್ನು ಆತುರಾತುರವಾಗಿ ಸುಡಿಸಿ ಕೋಟಲೆ ಕಳೆದುಕೊಂಡಿದ್ದಾರೆ ಸದರಿ ಬಸಪ್ಪ. ಇದು ಕೊಲೆ ಇರಬಹುದೆ ಎಂಬುದು ಇಲ್ಲಿನ ಜನರ ಶಂಕೆ!

—ಮುಳ್ಳೂರು ನಾಗರಾಜು

ನಡೆ ನುಡಿ ಸಿದ್ಧಾಂತ

ನಡೆನುಡಿ ಸಿದ್ಧಾಂತವಾದಲ್ಲಿ ಕುಲಹೊಲೆ ಸೂತಕವಿಲ್ಲ.
ನುಡಿಲೇಸು, ನಡೆಯಧಮವಾದಲ್ಲಿ
ಅದೆ ಬಿಡುಗಡೆ ಇಲ್ಲದ ಹೊಲೆ.
ಕಳವು ಪಾರದ್ವಾರಂಗಳಲ್ಲಿ ಹೆಲಬನರಿಯದೆ
ಕೆಟ್ಟು ನಡೆವುತ್ತ ಮತ್ತೆ ಕುಲಜರೆಂಬ ಒಡಲವರುಂಟೆ?
ಆಚಾರವೆ ಕುಲ, ಅನಾಚಾರವೆ ಹೊಲೆ
ಇಂತೀ ಉಭಯವ ತಿಳಿದರಿಯಬೇಕು
ಕೈಯುಳಿ ಕತ್ತಿ ಅಡೆಗುಂಟಕ್ಕಡಿಯಾಗಬೇಡ
ಅರಿ ನಿಜಾತ್ಮನಾ ರಾಮರಾಮನಾ

—ಮಾದಾರ ಚೆನ್ನಯ್ಯ

ಮಾದಾರ ಚನ್ನಯ್ಯ ಹಿರಿಯ ವಚನಕಾರರಲ್ಲಿ ಒಬ್ಬ. ಹಲವಾರು ಸಾಮಾಜಿಕ ಪರಿಕಲ್ಪನೆಗಳ ಬಗ್ಗೆ ಸ್ಪಷ್ಟ ಅಭಿಪ್ರಾಯವಿದ್ದವನು. ಮಾತು ಮತ್ತು ಕೃತಿಗಳ ಮಧ್ಯೆ ಸಾಮರಸ್ಯವಿಲ್ಲದವ ಹೊಲೆಯ ಎಂದು ಸ್ಪಷ್ಟವಾಗಿ ನಂಬಿದವನು. ಅವನ ಪ್ರಕಾರ ನಡೆ ನುಡಿ, ಸಿದ್ಧಾಂತವಾಗಬೇಕು; ಇದು ಸಾಮಾನ್ಯ ವಿಷಯವಲ್ಲ, 'ಸಿದ್ಧಾಂತ' ಎಂಬ ಪದಕ್ಕಿರುವ ಆಳ, ವೈಶಾಲ್ಯಗಳನ್ನು ನೆನೆದಾಗ ಇದರ ಅರಿವು ನಮಗಾಗುತ್ತದೆ. ಬಹುಶಃ ಹಾಗಾಗದಿದ್ದುದೇ ಇಂದು ನಮ್ಮ ಸುತ್ತಣ ಪರಿಸರದ ಅಧೋಗತಿಗೆ ಕಾರಣವಾಗಿದೆ. ಆಡುವುದು ಜೇನಿನಷ್ಟು ಸಿಹಿ. ಆದರೆ ಮಾಡುವುದು ಅಧಮ ಕೆಲಸ. ಎಲ್ಲ ರೀತಿಯ ಹಾದರಗಳನ್ನೂ ಮಾಡುತ್ತಾ ಕುಲಜರೆಂಬ ಬಾಹ್ಯ ಭ್ರಮೆಯಲ್ಲಿ ಸಿಕ್ಕಿ ಅಡಿಯಾಳಾದವರ ಬಗ್ಗೆ ಚನ್ನಯ್ಯ ಇಲ್ಲಿ ಪ್ರತಿಕ್ರಿಯಿಸಿದ್ದಾನೆ. ಚನ್ನಯ್ಯನ ಈ ಕಳಕಳಿ ನಂತರ ಬಂದ ಬಸವ, ಅಲ್ಲಮ ಮುಂತಾದವರೆಲ್ಲ ನಡೆ, ನುಡಿ ಶುದ್ಧತೆಯ ಬಗ್ಗೆ ಹೆಚ್ಚು ಆತಂಕಪಟ್ಟಿರುವುದನ್ನು ಕಾಣಬಹುದು.

—ಲಿಂಗದೇವರು ಹಳೆಮನೆ

ಬೀದಿ ಪಾಲಾಗಿದ್ದ ಶಿಕ್ಷಕರು ಹೋರಾಟದಿಂದ ಮತ್ತೆ ಕೆಲಸ

ಹಾಸನ ಜಿಲ್ಲಾ ಪರಿಶಿಷ್ಟ ಜಾತಿ ಮತ್ತು ವರ್ಗದ ೯೦ ಜನ ಹಂಗಾಮಿ ಶಿಕ್ಷಕರನ್ನು ಕೆಲಸದಿಂದ ತೆಗೆದುಹಾಕಲಾಗಿದ್ದನ್ನು ಪ್ರತಿಭಟಿಸಿ,ದ. ಸಂ.ಸ. ಆಶ್ರಯದಲ್ಲಿ ಹಂಗಾಮಿ ಶಿಕ್ಷಕರ ಸಂಘ ೧೧ದಿನಗಳು ಧರಣಿ ಸತ್ಯಾಗ್ರಹ ನಡೆಸಿ ನಂತರ ಡಿ.ಡಿ.ಪಿ.ಐ. ಕಛೇರಿ ಮುಂದೆ ಪಿಕೆಟಿಂಗ್ ಮಾ... ೭೫ಮಂದಿ ಬಂಧಿತರಾಗಿದ್ದರು. ದ.ಸಂ.ಸದ ತೀ... ಸ್ವರೂಪದ ಹೋರಾಟವನ್ನು ಮನಗಂಡ ಸರ್ಕಾ... ಶಿಕ್ಷಕರನ್ನು ಮರಳಿ ಕೆಲಸಕ್ಕೆ ತೆಗೆದುಕೊಳ್ಳುವ... ಆದೇಶ ನೀಡಿದೆ.

ಕೆಳವರ್ಗ ಮತ್ತು ಜಾತಿಯ ಜನರನ್ನು ... ರೀತಿಯ ಕೂಲಿಕಾರರನ್ನು ಪೋಲೀಸರಿಂದ ... ಸುವ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡು... ದಿನಗಳು ದೂರ ಉಳಿದಿಲ್ಲ.

—ದಗಾ...

ಏ ಜಂಗ್ ಹೈ ಆಜಾದಿ ಕಿ

(ಒಂದನೇ ಪುಟದಿಂದ)

ನಾನು ಶಹಾಬಾದಕ್ಕೆ ಒಂದು ಸಲಹೋದಾಗ ಅಲ್ಲಿಯ ವಿದ್ಯಾವಂತ ಹರಿಜನ ಯುವಕ ಭಾರತ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತನೊಬ್ಬನನ್ನು ಯುವಜನ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ನಾಯಕತ್ವ ವಹಿಸಿಕೊಳ್ಳಲು ಹೇಳಿದೆ. ಆಗ ಅವರು "ಹೊಲೆ-ಮಾದಿಗರು ನಾಯಕತ್ವ ವಹಿಸಿದರೆ ಅವರ ರಕ್ಷಣೆ ಮಾಡುವರಾರು? ಈ ಘಟ್ಟದಲ್ಲಿ ಅವರು ಕಾರ್ಯಕರ್ತರಾಗಿ ಬೆಳವಣಿಗೆ ಹೊಂದುವುದು ಸಮಂಜಸವಾದುದು" ಎಂದು ಹೇಳಿದ್ದು ಗುರುನಾಥರ ಮೇಲಾದ ಪೋಲೀಸ್ ದಬ್ಬಾಳಿಕೆಯ ಘಟನೆಯಿಂದಾಗಿ ಸತ್ಯವೆನಿಸಿತು.

ಕಾ|| ಗುರುನಾಥ ಪಾದರಸದಂಥ ವ್ಯಕ್ತಿತ್ವವುಳ್ಳವರು. ನೋವುಂಡು ಬದುಕುತ್ತಿರುವ ಜನತೆಗಾಗಿ ಹಗಲಿರುಳೂ ದುಡಿಯುವ ಆವೇಶವುಳ್ಳವರು. ಜನವರಿ 19ರಂದು ಫ್ಯಾಕ್ಟರಿಯ ಕಾರ್ಮಿಕರು ನ್ಯಾಯಕ್ಕಾಗಿ ಹೋರಾಟಕ್ಕಿಳಿಯುವ ಸಜ್ಜು ನಡೆಸಿದಾಗ ಗುರುನಾಥ ಮತ್ತು ಇನ್ನು ಮೂವರನ್ನು ಹಿಡಿದು ಪೋಲೀಸ್ ಠಾಣೆಗೆ ಒಯ್ದು ಅಮಾನುಷವಾಗಿ ಥಳಿಸಿದ್ದಾರೆ, ಬೂಟುಗಾಲಿನಿಂದ ಒದ್ದಿದ್ದಾರೆ. ಮರುದಿನ ಕಾರ್ಖಾನೆಯ ಆವರಣದಲ್ಲಿ ಸಬ್ ಇನ್ಸಪೆಕ್ಟರ್ ಮಾರುತಿ ಎಂಬುವನು ಅವರನ್ನು ಕರೆದು ವಾದ ಮಾಡುತ್ತ ಒಂದು ನಿಮಿಷದಲ್ಲೇ ಯಥಾ ಪ್ರಕಾರವಾದ ಕ್ರೂರ ರೂಪ ತಾಳಿ ಪಿಸ್ತೂಲು ತೆಗೆದು ಮೂರು ಗುಂಡು ಹಾಕಿದ್ದಾನೆ.

ತಡೆಯಾಜ್ಞೆ ರದ್ದತಿಗೆ ಧರಣಿ

'ದಲಿತರ ಭೂಮಿ ದಲಿತರಿಗೆ ದಕ್ಕುವಲ್ಲಿ ತ... ಯಾಗಿರುವ ಹೈಕೋರ್ಟ್ ತಡೆಯಾಜ್ಞೆ ರದ್ದತಿ... ರಾಜ್ಯಾದ್ಯಂತ ಜನವರಿ 11 ರಂದು ಧರಣಿ ಹೂ... ಬೇಕೆಂದು ಕರ್ನಾಟಕ ದಲಿತ ಸಂಘರ್ಷ ಸಮಿ... ಕರೆಗೆ, ಮಂಡ್ಯ, ಚಿಕ್ಕಮಗಳೂರು, ತುಮ... ರು,ಹಾಸನ,ಬೆಂಗಳೂರು,ಮಂಗಳೂರು,ಗುಲ್ಬರ್ಗ... ಕೋಲಾರ,ಮೈಸೂರು ಮುಂತಾದಜಿಲ್ಲಾ ಮತ... ತಾಲ್ಲೂಕು ದ.ಸಂ.ಸ ಶಾಖೆಗಳು ಜಿಲ್ಲಾಧಿಕಾ... ಹಾಗೂ ತಹಶೀಲದಾರರ ಕಛೇರಿ ಮುಂದೆ ಧರ... ಸತ್ಯಾಗ್ರಹ ಮಾಡಲಾಯಿತು.

ಮಂಗಳೂರಿನಲ್ಲಿ ದ.ಸಂ.ಸ ಸಭೆ

ಮಂಗಳೂರು-ಉರ್ವಸ್ಟೋರ್ ಮೈದಾನದ... ನಗರ ಪಾಲಿಕೆಯ ಜಡನೀತಿಯ ಬಗ್ಗೆ ಸಾರ್ವಜ... ಕರ ಗಮನ ಸೆಳೆಯಲು ದ.ಸಂ.ಸ. ಸ್ಥಳೀಯ... ಶಾಖೆ೧೭-೧-೮೨ರಂದು ಸಾರ್ವಜನಿಕಸಭೆಯನ್ನು ಏರ್ಪಡಿಸಿತ್ತು. ಎಂ.ಡಿ.ಗಂಗಯ್ಯ,ರಾಮಕೃಷ್ಣ... ಹೆಚ್.ಸಿ.ರಾಜಣ್ಣ,ಪಿ.ಕಮಲಾಕ್ಷ ಮಾತನಾ... ದರು. ಸಭೆಯು ಪ್ರತಿಯೊಬ್ಬ ಪೌರಕಾರ್ಮಿಕನಿ... ಗೂ ಮನೆ, ವಿದ್ಯುತ್‌ದೀಪ, ನೀರಿನ ಸೌಕರ್ಯ... ಒದಗಿಸಬೇಕು ಮತ್ತು ಬೀದಿಬದಿಯಲ್ಲಿ ಚಪ್ಪ... ಕೆಲಸ ಮಾಡುವವರಿಗೆ ಆಶ್ರಯ ನೀಡಬೇಕೆಂದು ಸರ್ಕಾರವನ್ನು ಒತ್ತಾಯಿಸಿತು.

ಖಾಕಿ ರೂಪದಲ್ಲಿ ಬಂದ ಸಾವು

ಸರ್ಕಾರಕ್ಕೆ ಶಂಭಯ್ಯನ ಅಂತಿಮ ಪತ್ರ

ಸ್ವಾಮಿ, ಬಿ. ಎಂ. ಶಂಭಯ್ಯ, ಸರ್ವೆ ಆಫೀಸಿನಲ್ಲಿ ಕೆಲಸ ಮಾಡುತ್ತಿರುವ ಬಿ. ಎಂ. ಶಂಭಯ್ಯ ನಾನ... ಬರೆದುಕೊಂಡ ಅರ್ಜಿ.

ನಾನು ಸಾಯುವುದು ನಿಜ. ಕಾರಣ ತಾರೀಖು ೧೯-೧-೮೨ ರಂದು ಟೌನ್ ಪೋಲೀಸ್ ಸಬ... ಇನ್ಸ್‌ಪೆಕ್ಟರ್ ಬಾಸ್‌ಸಾಯಬ್ ನನ್ನನ್ನು ಹೊಡೆದು ಮತ್ತು ಚೆಲ್ಲಪ್ಪ ಎಂಬುವವರು ನನ್ನನ್ನು ಹೊಡೆದು ಕುಡಿದು ಬಾಯಿಗೆ ಬಂದಂತೆ ಮಾತನಾಡಿ ಮತ್ತು ನನ್ನ ಹೆಂಡತಿಗೆ ಮಾತ್ರ ಯಾವ ತರಹದ ಹಣವು ನನ... ನನ್ನ ಹಕ್ಕು ಸೇರತಕ್ಕದ್ದಲ್ಲ. ನನ್ನ ಹಣ ೫ ಜನ ಮಕ್ಕಳಿಗೆ ಸೇರತಕ್ಕದ್ದು. ನನ್ನ ಕೊನೆ ಆಸೆ. ಅದೆ ಮಕ್ಕಳಿ... ಮಾತ್ರ ಸೇರತಕ್ಕದ ವಿಷ್ಯ. ಅದೇ ಬಾಸ ಎಸ್ ಐ ಮತ್ತು ಚೆಲ್ಲಪ್ಪ ಪೋಲೀಸ್ ಇವರಿಗೆ ಮಾತ್ರ ಸರ್ಕಾ... ಶಿಕ್ಷೆ ಕೊಡಬೇಕೆಂದು ಬೇಡಿಕೊಳ್ಳುತ್ತೇನೆ.

—ಬಿ. ಎಂ. ಶಂಭಯ...

ಈ ಪತ್ರಿಕೆಯು ರಾಮದೇವ ರಾಕೆ ಅವರ ಸಂಪಾದಕತ್ವದಲ್ಲಿ, ವಿನ್ಯಾಸ ಪ್ರಿಂಟರ್ಸ್, ಮೈಸೂರು-9 ಇಲ್ಲಿ ಮುದ್ರಿಸಲ್ಪಟ್ಟು ಎಚ್. ಗೋವಿಂದಯ್ಯ ಅವರಿಂದ ಪ್ರಕಟಿಸಲ್ಪಟ್ಟಿತು. ವಿಳಾಸ : ಮಾಸ್ತಿಗುಡಿ, 2ನೇ ಕ್ರಾಸ್, ಅಶೋಕಪುರಂ, ಮೈಸೂರು-570008.